ಆರ್. ಎಸ್. ನಾಯ್ಡು
R. S. Naidu



ಕೆ. ವಿ. ಸುಬ್ರಹ್ಮಣ್ಯಂ

Karnataka Lalitakala Academy

ಆರ್. ಎಸ್. ನಾಯ್ಡು

ಕೆ.ವಿ. ಸುಬ್ರಹ್ಮಣ್ಯಂ

ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

R.S. Naidu : A Monograph by **K.V. Subramaniyam**
40/3, 10th Cross, 1st Main, Bapujinagara
Bangalore - 560 026.

Published by: Registrar, **V. N. Mallikarjuna Swamy,**
Karnataka Lalithakala Academy
Kannada Bhavana, J .C. Road, Bangalore 02

ಪುಟಗಳ ಸಂಖ್ಯೆ : 52

ಬೆಲೆ : **70/-**

ಪ್ರಧಾನ ಸಂಪಾದಕ : **ಎ. ಟಿ. ಕಾಳೆ**

ಪ್ರಕಾಶಕರು :
ವಿ. ಎನ್. ಮಲ್ಲಿಕಾರ್ಜುನ ಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - 560 002.
ದೂರವಾಣಿ : 080-22480297

ಮುಖಪುಟ ವಿನ್ಯಾಸ : **ವೇಣು**

ಮುದ್ರಣ
ರಶ್ಮಿ ಪ್ರಿಂಟ್ ಸರ್ವೀಸ್
ನಂ. 8, 1ನೇ ಅಡ್ಡರಸ್ತೆ, ಕಲಾಸಿಪಾಳ್ಯ ಹೊಸ ಬಡಾವಣೆ
ಬೆಂಗಳೂರು - 560 002
ದೂರವಾಣಿ : 9901916581

ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಳೆದ ನಲವತ್ತುಮೂರು ವರುಷಗಳಿಂದ ಲಲಿತ ಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆ ಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರ ಕಲಾಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ ಕಲಾವಿದರ ಮಾಲೆ ಪುಸ್ತಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನೂ ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕಟಿತ ಕೆ.ವಿ. ಸುಬ್ರಹ್ಮಣ್ಯಂರವರ **ಆರ್. ಎಸ್. ನಾಯ್ಡು** ಪುಸ್ತಕವು ಅವರ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರೂ ಸ್ವತಃ ಕಲಾವಿದರಾಗಿದ್ದು, ಪ್ರಸ್ತುತ ಕಲಾವಿದ ಜೀವನ, ಸಾಧನೆಗಳನ್ನು ಅರಿತವರಾಗಿದ್ದರಿಂದ ಈ ಕಲಾವಿದರ ಸಮಗ್ರ ಪರಿಚಯವು ಈ ಪುಸ್ತಕವು ಓದುಗರ ಗಮನಕ್ಕೆ ತರುತ್ತದೆ ಎಂದು ಭಾವಿಸಲಾಗಿದೆ.

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ಧಪಡಿಸಿ ಓದುಗರ ಕೈಗಿತ್ತಿದ್ದೇವೆ.

ಎಂದಿನಂತೆ ಕಲಾಸಕ್ತರು, ಕಲಾವಿದರು, ಕಲಾ ಇತಿಹಾಸ ಪ್ರೇಮಿಗಳು ಈ ಪುಸ್ತಕಗಳನ್ನು ಸ್ವಾಗಿತಿಸುತ್ತಾರೆಂದು ಆಶಿಸಲಾಗಿದೆ.

ಈ ಪುಸ್ತಕವನ್ನು ಮುದ್ರಿಸಿದ ರಶ್ಮಿ ಪ್ರಿಂಟ್ ಸರ್ವಿಸ್ ಅವರಿಗೂ ಪ್ರಕಟಿಸಿದ ಕರ್ನಾಟಕದ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಎ. ಎನ್. ಮಲ್ಲಿಕಾರ್ಜುನ ಸ್ವಾಮಿ ಅವರಿಗೂ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.


ಬೆಂಗಳೂರು

ಎ. ಟಿ. ಕಾಳೆ

ನಿಮ್ಮೊಂದಿಗೆ .....

ಕನ್ನಡ ದೃಶ್ಯಕಲಾ ಇತಿಹಾಸದ ವಿಶಿಷ್ಟವ್ಯಕ್ತಿತ್ವದ ಕಲಾವಿದ ಆರ್.ಎಸ್.ನಾಯ್ಡು. ಅವರು ಹಲವು ಮೂಲಗಳ ಜ್ಞಾನದ ನೆರವಿನಿಂದ ಚಿತ್ರ-ಶಿಲ್ಪಗಳನ್ನು ಸೃಷ್ಟಿಸಿದವರು. ಇಂದು ಹಲವರ ಬಳಿ ಅವರ ಚಿತ್ರ, ಶಿಲ್ಪಗಳು ಇವೆ. ಆದರೆ ಕೆ. ಆರ್. ಕೃಷ್ಣಸ್ವಾಮಿಯವರ ಸಂಗ್ರಹ ಅಪೂರ್ವವಾದುದು ; ಅಧ್ಯಯನ ಶೀಲರಿಗೆ ಉಪಯುಕ್ತವಾದುದು. ಈ ಪುಸ್ತಕ ಬಹುತೇಕ ಅವರ ಸಂಗ್ರಹಕ್ಕೆ ಋಣಿಯಾಗಿದೆ. ಆರ್.ಎಸ್. ನಾಯ್ಡುರವರ ಶತಮಾನೋತ್ಸವ ಆಚರಣೆಯ ಸಂಧರ್ಭದಲ್ಲಿ ಈ ಪುಟ್ಟ ಬರಹ ಬರೆಯಲು ಕಾರಣರಾದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ರಿಜಿಸ್ಟ್ರಾರ್ ಹಾಗೂ ಸದಸ್ಯರನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಬಹುಮುಖ್ಯವಾಗಿ ಈ ಹಿಂದಿನ ರಿಜಿಸ್ಟ್ರಾರ್ ಬಿ. ಟಿ. ಮುನಿರಾಜಯ್ಯನವರು ನಾಯ್ಡು ಬಗ್ಗೆ ಪ್ರೀತಿ ತೋರಿದವರು. ಪ್ರಸ್ತುತ ರಿಜಿಸ್ಟ್ರಾರ್ ವಿ. ಎನ್. ಮಲ್ಲಿಕಾರ್ಜುನ ಸ್ವಾಮಿಯವರು ಪುಸ್ತಕ ರೂಪದಲ್ಲಿ ಸುಂದರವಾಗಿ ಹೊರಬರಲು ಕಾರಣರಾಗಿದ್ದಾರೆ. ಜನಸಾಮಾನ್ಯರಿಗೆ ದೃಶ್ಯಕಲಾವಿದರ, ಕಲೆಯ ಕುರಿತು ಪರಿಚಯಿಸುವ ಉದ್ದೇಶದ ಈ ಪುಸ್ತಕಮಾಲೆಯ ಮಿತಿಗಳಲ್ಲಿ ಮೂಡಿ ಬಂದಿರುವ ಪುಸ್ತಕ ಇದು.

- ಕೆ. ವಿ. ಸುಬ್ರಹ್ಮಣ್ಯಂ



ತಲ್ಲಣದ ಬಡಲಾಳ : 1

ಕಲೆ ನೆಮ್ಮದಿಯ ಸಂದರ್ಭದಲ್ಲಿ, ಶಾಂತ ವಾತಾವರಣದಲ್ಲಿ ಮಾತ್ರ ಹುಟ್ಟಿ ಬರುತ್ತದೆ, ಎಂಬ ನಂಬಿಕೆ ಕೆಲವರಲ್ಲಿದೆ. ಆದರೆ ಆತಂಕಕಾರಿ, ಕ್ರಾಂತಿಕಾರಿ ಹಾಗೂ ತಲ್ಲಣಗಳ ಮನಸ್ಥಿತಿ, ಸಂದರ್ಭಗಳಲ್ಲಿಯೂ ಕಲಾವಿದರು ಅಭಿವ್ಯಕ್ತಿಸುತ್ತಾರೆ; ಸೂಕ್ತ ಮಾಧ್ಯಮಗಳನ್ನೂ ಆರಿಸಿಕೊಳ್ಳುತ್ತಾರೆ. ದೃಶ್ಯಕಲೆಯಿಂದ ಎಲ್ಲರಿಗೂ ಆಗುವ ಅನುಭವ ಕೊಡುವ ಸಂಸ್ಕಾರ ಇತ್ಯಾದಿಗಳ ಬಗೆಗೆ ನೂರಾರು ರೀಮುಗಟ್ಟಲೆ ಕಾಗದದ ಪುಸ್ತಕಗಳಲ್ಲಿ ತುಂಬಿ ಹೋಗಿವೆ. ಆದರೆ ದೃಶ್ಯಕಲೆ ಮುಖ್ಯವಾಗಿ ಅದನ್ನು ಸೃಷ್ಟಿಸಿದ ಕಲಾವಿದನ ಅಭಿವ್ಯಕ್ತಿ. ಎಲ್ಲರಿಗೂ ಅವರ ಅಭಿವ್ಯಕ್ತಿಗೆ ಸೂಕ್ತ ಮಾಧ್ಯಮವನ್ನು ಆಯ್ಕೆಮಾಡಿಕೊಳ್ಳುವ, ಅಭಿವ್ಯಕ್ತಿಸುವ ಸಾಧ್ಯತೆ ಇದ್ದೇ ಇದೆ. ಹಾಗಾಗಿ ಕ್ರಾಂತಿಕಾರಿಗಳಲ್ಲೂ, ಸರ್ವಾಧಿಕಾರಿಗಳಲ್ಲೂ ಕಲೆ-ಸೌಂದರ್ಯ ಕುರಿತ ಪ್ರಜ್ಞೆಗಳೂ ಅವರು ಮನುಷ್ಯರಾಗಿರುವುದರಿಂದ ಇರುತ್ತವೆ. ಹಿಟ್ಲರ್ ಸಹ ಎಲ್ಲರಂತೆ ವಿಯನ್ನಾದ ಅಕಾಡೆಮಿ ಆಫ್ ಫೈನ್ ಆರ್ಟ್‌ನಲ್ಲಿ ಕಲಿಯಲು ಪ್ರಯತ್ನಿಸಿದ್ದು ಉಂಟು.

ಕನ್ನಡ ದೃಶ್ಯ ಕಲೆಯ ಇತಿಹಾಸದ ತುಂಬ ಕಲೆಗಿಂತಲೂ ಕಲಾವಿದರ ಕಥೆಗಳೇ ತುಂಬಿಹೋಗಿವೆ. ಕಲೆಯ ಬಗೆಗಿನ ವಿವರಗಳ ವಿದ್ಯಮಾನ ಅಪರೂಪ. ಕೆಲವು ಕಲಾವಿದರೇ ಹಾಗೆ. ಅವರ ಬದುಕಿನ ಪುಟಗಳು ಬಿಚ್ಚಿಕೊಳ್ಳುವ ಹಾಗೆ ಅವರ ಅಭಿವ್ಯಕ್ತಿಯ ಹೊಳಹುಗಳು ಇರುವುದಿಲ್ಲ. ಒಬ್ಬೊಬ್ಬರದೂ ಒಂದೊಂದು ದಾರಿಯಾಗಿರುವುದರಿಂದ ಅವರ ಅಭಿವ್ಯಕ್ತಿಗಳು ವಿಶಿಷ್ಟ. ವೈವಿಧ್ಯತೆಯಿಂದ ಕೂಡಿರುವುದು ಸಹಜ. ಕೆಲವರ ಅಭಿವ್ಯಕ್ತಿಗಳು ಸರಳವಾಗಿದ್ದು ಸಿಹಿಯಾದ ಬಣ್ಣಗಳಿಂದ, ಸಂಪ್ರದಾಯ ಮಾಧ್ಯಮಗಳಿಂದ ಮೂಡಿಬಂದಿದ್ದರೆ ಮತ್ತೆ ಕೆಲವರವು ಸಂಕೀರ್ಣ ಬಣ್ಣಗಳ ಸಂಯೋಜನೆಯಿಂದ, ಹೊಸ ಸಂದರ್ಭದ ಹೊಸ ಗ್ರಹಿಕೆಗೆ, ಹೊಸ ಪದಾರ್ಥ (Material) ಗಳ ಮಾಧ್ಯಮದಿಂದ ಮೂಡಿ ಬಂದಿವೆ. ಇತಿಹಾಸಕಾರರು ಈ ಎಲ್ಲರ ಬಗ್ಗೆ ಬರೆಯುವಾಗ ಕೆಲವರ ಬದುಕು ಮತ್ತು ಅಭಿವ್ಯಕ್ತಿ ಇತರರಿಗಿಂತ ವಿಭಿನ್ನ ಆಯಾಮಗಳ ಗ್ರಹಿಕೆಗಳಿಂದಾಗಿ ವಿಶೇಷವಾಗಿ ಬಿಂಬಿಸುತ್ತಾರೆ. ಅಂತಹವರ ಬಗೆಗಿನ ಬರಹಗಳು, ಅಥವಾ ವಿಮರ್ಶೆಗಳು ಸಹಜವಾಗಿಯೇ ಇತರರ ಬಗ್ಗೆ ಬೇರೆಯವರು ಅಥವಾ ಅವರೇ ಬರೆದರೂ ಇರಲಾರದಷ್ಟು ವಿಶಿಷ್ಟ ಹೊಳಹುಗಳಿಂದ ಕೂಡಿರುತ್ತವೆ. ಆರ್.ಎಸ್. ನಾಯ್ಡುರವರ (1906-1985) ಅಭಿವ್ಯಕ್ತಿಗಳು ಇಂತಹ ವಿಶಿಷ್ಟ ಹಾದಿಗೆ ಸೇರುವಂತಹವು ಅಲ್ಲ. ಆದರೆ ಅವರ ಸಂದರ್ಭ ಹಾಗೂ ಅವರ ಬದುಕು ಅವರ ಅಭಿವ್ಯಕ್ತಿಗಳಿಗೆ ವಿಶೇಷ ಭೂಮಿಕೆಯನ್ನು ಒದಗಿಸಿಕೊಟ್ಟಿವೆ. ಅಸಾಧಾರಣ ಪುರುಷ, ಜ್ಞಾನಿ, ಆದರ್ಶವಾದಿ ಅವರದೇ ಒಂದು ಪ್ರಪಂಚ. ಮುಖ್ಯವಾಗಿ ಅವರ ಮಾನಸಿಕ ಅಥವಾ ಭೌತಿಕ ಪ್ರಪಂಚಗಳ ಯಾವ ಘಟನೆಯಾಗಲೀ ಅವರ ಪ್ರತಿಕ್ರಿಯೆ ಕಾವೇರಿ ಉಕ್ಕಿದಾಗ ಅಭಿವ್ಯಕ್ತವಾಗುತ್ತಿದ್ದುದು ಬರಹ ರೂಪದಲ್ಲಿ. ಅವುಗಳಲ್ಲಿ ಎದ್ದು ಕಾಣುವ ಒಂದು ಅಂಶ ರೇಖೆಗಳ ಮೇಲಿದ್ದ ಅವರ ಅಧಿಪತ್ಯ.

1905ರಲ್ಲಿ ಲೆನಿನ್ ಸಾರಿದ 'ಸಾಹಿತ್ಯ ಮತ್ತು ಕಲೆ ಜನರಿಗಾಗಿ' ಎಂಬ ಮಾತುಗಳಿಂದ ಪ್ರಭಾವಿಸಲ್ಪಟ್ಟವರು ಆರ್.ಎಸ್.ನಾಯ್ಡು. ಸಾಹಿತ್ಯ, ರಾಜಕೀಯ, ವಿಜ್ಞಾನ, ತತ್ವಶಾಸ್ತ್ರ ಮನಃಶಾಸ್ತ್ರ ಮೊದಲಾದ ವಿಷಯಗಳ ಕುರಿತ ಅವರ ಮಾತುಗಳು ಕೇಳುಗರಿಗೆ ವಿಶೇಷ ಅನುಭವ ನೀಡುತ್ತಿದ್ದವು. ಚೆನ್ನಾಗಿ ಓದಿಕೊಂಡಿದ್ದ ನಾಯ್ಡು ಹಲವಾರು ಜ್ಞಾನ ಮೂಲಗಳ ಅಧ್ಯಯನದಿಂದ ಪಕ್ವಗೊಂಡಿದ್ದವರು. ಆದರೂ ಇಷ್ಟ ಬಂದ ಹಾಗೆ ನಡೆದುಕೊಳ್ಳುವ, ಇತರರಿಗೆ ಅಶಿಸ್ತು ಎನ್ನಿಸಿಕೊಂಡರೂ ತಮ್ಮದೇ ಆದ ರೀತಿಯ ಶಿಸ್ತು ಹೊಂದಿದ್ದ ಅವರನ್ನು ಒಂದು ರೀತಿಯ 'ಸಮಸ್ಯಾ ಪುರುಷ'[1] ಎನ್ನಬಹುದು. 6-10-1985ರಲ್ಲಿ ನಾಯ್ಡು ನಿಧನರಾದಾಗ ಪ್ರಕಟವಾದ ಪ್ರಜಾವಾಣಿಯ ವರದಿ ಓದಿ:

ಖ್ಯಾತ ಕಲಾವಿದ ಆರ್.ಎಸ್.ಎನ್. ನಿಧನ

ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಆರ್.ಎಸ್.ನಾಯ್ಡು (80)

ಇಂದು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಕೆಲವು ತಿಂಗಳಿಂದ ಅವರು ಅಸ್ವಸ್ಥರಾಗಿದ್ದರು. ಶಿಲ್ಪಿ ಮತ್ತು ವ್ಯಂಗ್ಯಚಿತ್ರಕಾರರಾಗಿ 'ಆರ್.ಎಸ್. ಎನ್.' ಎಂದು ಖ್ಯಾತರಾಗಿದ್ದ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಹಲವು ವರ್ಷಗಳ ಕಾಲ ಗಡಿಪಾರು ಶಿಕ್ಷೆ ಮತ್ತು ಸೆರೆಮನೆವಾಸ ಅನುಭವಿಸಿದ್ದರು.

ಆರ್. ಸೀತಾಪತಿನಾಯ್ಡು ಅವರ ವ್ಯಂಗ್ಯ ಚಿತ್ರಗಳು ಅನೇಕ ಭಾಷೆಗಳ ಪತ್ರಿಕೆಗಳಲ್ಲಿ ಬೆಳಕುಕಂಡಿವೆ. ಅವರು ಯಾರಿಗೆ ಪತ್ರ ಬರೆದರೂ ಸಾಮಾನ್ಯವಾಗಿ ಅದರಲ್ಲಿ ಒಂದು ಚಿತ್ರ ಬಿಡಿಸುತ್ತಿದ್ದರು.

ನಾಯ್ಡು ಅವರು ತಮ್ಮ ಕಲೆಗೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿ ಬಹುಮಾನಗಳನ್ನು ಪಡೆದಿದ್ದಾರೆ

ಪ್ಲಾಸ್ಟರ್ ಆಫ್ ಪ್ಯಾರೀಸಿನಲ್ಲಿ ಅವರು ಗಾಂಧಿ, ಬುದ್ಧ, ಜೆ.ಪಿ., ಅಶೋಕ ಮೆಹತಾ ಮುಂತಾದವರ ಶಿಲ್ಪ, ಬೇಂದ್ರೆ, ಕೈಲಾಸಂ ಮುಂತಾದವರ ಕೃತಿಗಳನ್ನೂ ಸೃಷ್ಟಿಸಿದ್ದಾರೆ.


---

1. 'ಬ್ಯಾಲೆಗೆ ಭ್ರಮಿಸಿದ ಆರ್.ಎಸ್. ಎನ್.'- ಪುಟ 4, ಬಿ.ವಿ.ಕೆ. ಶಾಸ್ತ್ರಿ ಪ್ರ: ಜನಪದ ಅಕಾಡೆಮಿ, ಬೆಂಗಳೂರು - 10, 1995,

ಪ್ರಾರಂಭದಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದ, ಮಹಾತ್ಮ ಗಾಂಧೀಜಿ ಒಡನಾಡಿಗಳಾಗಿದ್ದ ಅವರು ತಮ್ಮ ಕೊನೆಯ ದಿನಗಳಲ್ಲಿ ಕಮ್ಯುನಿಸಂ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದರು.

ಬೆಂಗಳೂರನ್ನು ಬಿಟ್ಟು ಮೈಸೂರಿನಲ್ಲಿ ವಾಸಿಸಲು ಯೋಚಿಸಿದ ಅವರು ಕಳೆದ 25 ವರ್ಷಗಳಿಂದ ಮೈಸೂರಿನಲ್ಲಿ ವಾಸಿಸುತ್ತಿದ್ದರು.

ತಾ: 7-10-1985 **ಪ್ರಜಾವಾಣಿ**



ರೇಖಾ ಚಿತ್ರದಲ್ಲಿ
ತಲ್ಲೀನ ಆರ್.ಎಸ್.ಎನ್

ಮಣ್ಣಿಗೆ ಹತ್ತಿರವಾಗಿ, ಜನರಿಗೆ ಹತ್ತಿರವಾಗಿ ಪ್ರೀತಿಯಿಂದ ಬದುಕಿದ ಆರ್.ಎಸ್.ಎನ್. ನಾಯ್ಡು ತಾವು ಭೇಟಿ ಮಾಡಿದವರ ಬಗ್ಗೆ ತೋರುತ್ತಿದ್ದ ಆದರ, ಅಭಿಮಾನ, ಮಾನವೀಯವಾದುದು. ಇಮ್ಯಾನ್ಯುಯಲ್ ಕಾಂಟ್ ತಮ್ಮ ಸಾವಿಗೆ 9 ದಿನಗಳ ಮುಂಚೆ ಅವರನ್ನು ಭೇಟಿ ಮಾಡಲು ಬಂದವರೊಬ್ಬರು ಕುರ್ಚಿಯ ಮೇಲೆ ಕುಳಿತುಕೊಳ್ಳುವವರೆಗೂ ನಿಂತೇ ಇದ್ದರು; ಬಂದಿದ್ದವರು ಕುಳಿತುಕೊಂಡ ನಂತರವಷ್ಟೇ ತಮ್ಮ ಅಳಿದುಳಿದ ಶಕ್ತಿಯನ್ನೆಲ್ಲಾ ಕ್ರೋಢೀಕರಿಸಿ, ಪ್ರಯತ್ನಿಸಿ ಬಹುಕಷ್ಟದಿಂದ ಕುರ್ಚಿಯ ಮೇಲೆ ಕುಳಿತರು. ಆಗವರು ಹೇಳಿದ್ದು, ಕ್ಷೀಣಿಸುತ್ತಿದ್ದ ಧ್ವನಿಯಲ್ಲಿ "The sense of humanity has not yet left me". 18ನೆಯ ಶತಮಾನದಲ್ಲಿ ನಡೆದ ಈ ಸಂದರ್ಭ ಇನ್ನೂ ಮುಂದುವರೆದು, "two men were moved almost to tears" ನಂತಾಯಿತು[2] ಇಂತಹ ಸಂದರ್ಭಗಳು ರಾಜ್‌ಕುಮಾರ್, ಆರ್. ಎಂ. ಹಡಪದ್, ಹಾಗೂ ಆರ್. ಎಸ್. ಎನ್. ರಂತಹ ವರನ್ನು ನೋಡಲು ಹೋದಾಗ ಮಾತ್ರ ಸಾಧ್ಯ!

ಆರ್.ಎಸ್.ನಾಯ್ಡುರವರು ಮಾನವೀಯತೆಯನ್ನು ಬದುಕಿನ ಮೌಲ್ಯವಾಗಿ ಅರಗಿಸಿಕೊಂಡಿದ್ದವರು. ಹಾಗಾಗಿಯೇ ಅವರಿಗೆ ಅಸಂಖ್ಯಾತ ಮಿತ್ರರು, ಅಭಿಮಾನಿಗಳು, ಅದೃಶ್ಯ ಅಭಿಮಾನಿಗಳೂ ಇದ್ದರು; ಇದ್ದಾರೆ. ಪಿ.ಆರ್.ಟಿ., ಬಿ.ಪಿ.ಕೆ., ಇ.ಆರ್. ಸೇತೂರಾಮ್ ಆರ್.ಎಮ್.ಹಡಪದ್, ಹೆಚ್.ಎಸ್.ಇನಾಮತಿ, ಕೆ.ಆರ್. ಕೃಷ್ಣಮೂರ್ತಿಯವರುಗಳು ಈ ವಿಶಿಷ್ಟ ವ್ಯಕ್ತಿಯ ಅಪೂರ್ವ ಮಾನವೀಯತೆಯನ್ನು ಅನುಭವಿಸಿದ್ದಾರೆ.

ಕೆಲವು ಸಣ್ಣ ವಿವರಗಳೂ ಅನುಭೂತಿಗೆ ಕಾರಣವಾಗುತ್ತವೆ. 7-11-1973ರಲ್ಲಿ ತಮಗೆ ಪಿ.ಆರ್.ಟಿ. ಯವರು ಕೊಡುಗೆಯಾಗಿ ನೀಡಿದ್ದ 'lenin prize winners soviet stars, soviet fine arts' ಪುಸ್ತಕ ಮಾಸ್ಕೋದ progress publishers ಪ್ರಕಾಶನದ್ದು. ಆರ್.ಎಸ್.ಎನ್. ಅದನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೆಚ್.ಎಸ್.ಇನಾಮತಿಯವರಿಗೆ ನೀಡಿದ್ದರು. ಕಲಾಸೃಷ್ಟಿಯ ದೃಷ್ಟಿಯಲ್ಲಿ ಇಬ್ಬರದೂ ವಿಭಿನ್ನ ಧೋರಣೆ. ಪರಿಚಯ, ಸ್ನೇಹಗಳೇ ಬೇರೆಯಲ್ಲವೇ? ನೋಡಿ. ಪುಸ್ತಕದಲ್ಲಿ From P.R. Thippeswamy to RSN to H. S. Inamati ಎಂದು ಬರೆದು ಲೆನಿನ್ ರೇಖಾಚಿತ್ರಗಳನ್ನೂ, ಇನ್ನೊಬ್ಬ ಶಿಲ್ಪಿಯ ರೇಖಾಚಿತ್ರವನ್ನೂ ರೇಖಿಸಿದ್ದಾರೆ. ಈ ಪುಸ್ತಕ ಬೆಂಗಳೂರಿನ ಬಸವನಗುಡಿಯಲ್ಲಿರುವ ಕಲಾಮಂದಿರದ ಲೈಬ್ರರಿಯಲ್ಲಿದೆ; A/c ಸಂಖ್ಯೆ 346, ಅವರ ವೈಯಕ್ತಿಕ 'Identity' ಹಲವು ರೀತಿಗಳಲ್ಲಿ ಈ ಪುಸ್ತಕದ ಮೂಲಕ ಅನುಭವವಾಗುತ್ತದೆ.

---

2 Meaning in the Visual Arts, Erwin panofsky, p-1, pub Double day Anchor Books, garden city N.Y. 1995.

ಕಲೆ ನೆಮ್ಮದಿಯ ವಾತಾವರಣದಲ್ಲಿ ಮಾತ್ರ ಹುಟ್ಟಿಬರುತ್ತದೆ ಎಂಬ ನಂಬಿಕೆ ಹಲವರದು. ಆದರೆ ಕ್ರಾಂತಿಕಾರಿ, ಆತಂಕಕಾರಿ ಸಂದರ್ಭಗಳ ತಲ್ಲಣದ ಮನಸ್ಥಿತಿಯಲ್ಲಿಯೂ ಅಭಿವ್ಯಕ್ತಿಗೆ ಹಲವು ಹಾದಿಗಳನ್ನು, ಮಾಧ್ಯಮಗಳನ್ನು ಮನುಷ್ಯರು ದುಡಿಸಿಕೊಳ್ಳುತ್ತಾರೆ. ಹಾಗಾಗಿಯೇ ಆರ್.ಎಸ್.ಎನ್. ರಂತಹ ಕ್ರಾಂತಿಕಾರಿ ಮನಸ್ಥಿತಿಯವರೂ ಅಭಿವ್ಯಕ್ತಿಗೆ ಪೂರಕವಾಗಿ ದೃಶ್ಯ ಸಂಸ್ಕೃತಿಯ ರೇಖೆ ಹಾಗೂ ಶಿಲ್ಪ ಮಾಧ್ಯಮವನ್ನ ಜತೆಗೆ ಅಕ್ಷರ ಮಾಧ್ಯಮದ ಕ್ಯಾಲಿಗ್ರಾಫಿ ಕಲೆಯನ್ನೂ ಬಳಸಿಕೊಂಡರು.

ಆರ್.ಎಸ್.ಎನ್. ವ್ಯಕ್ತಿತ್ವವನ್ನು ಅನುಭಪಿಸಲು ಆರ್.ಎಮ್. ಹಡಪದ್‌ರವರು 1973ರಲ್ಲಿ ಚಿತ್ರಿಸಿರುವ ತೈಲವರ್ಣದ ಭಾವಚಿತ್ರವನ್ನು ಗಮನಿಸಬಹುದು. ದಿ|| ಎಸ್. ನಂಜುಂಡ ಸ್ವಾಮಿಯವರು ಚಿತ್ರ ಸೃಷ್ಟಿಯ ನೆರಳು-ಬೆಳಕಿನ ಸಂಯೋಜನೆಯ ಸಂದರ್ಭದಲ್ಲಿ "1/4 ಭಾಗ ಬೆಳಕು, 3/4 ಭಾಗ ಕತ್ತಲು" ಇರುವಂತೆ "ಭೂದೃಶ್ಯಗಳನ್ನು ಸಂಯೋಜಿಸಿದರೆ ಉತ್ತಮ" ಎಂಬ ಅಭಿಪ್ರಾಯದವರು. ಆ ದೃಷ್ಟಿಗೆ ಹತ್ತಿರವಾದಂತೆ ಭಾವಚಿತ್ರದ ಸೃಷ್ಟಿಯ ಸಂದರ್ಭದಲ್ಲಿಯೂ ಆರ್.ಎಮ್.ಹೆಚ್. ರವರು ಆರ್.ಎಸ್.ಎನ್. ರವರ ಹಿನ್ನೆಲೆಯಲ್ಲಿ ಕತ್ತಲು ಬೆಳಕಿನ ಲೆಕ್ಕಾಚಾರದ ಆಟದಲ್ಲಿ ಆರ್.ಎಸ್.ಎನ್. ರವರ ವ್ಯಕ್ತಿತ್ವವನ್ನು ಸಾಂಕೇತಿಕವಾಗಿ 1/4 ಭಾಗ ಕಪ್ಪು ಬಣ್ಣ, 3/4 ಭಾಗ ಕೆಂಪು ಬಣ್ಣವನ್ನು ಸಂಯೋಜಿಸಿದ್ದಾರೆ. ಅಸಾಮಾನ್ಯ ಕಲಾವಿದರಾಗಿದ್ದ ಆರ್.ಎಮ್.ಹೆಚ್. ರವರು ಆರ್.ಎಸ್.ಎನ್. ರವರ ಮನಸ್ಥಿತಿ, ವ್ಯಕ್ತಿತ್ವಗಳನ್ನು ಅರಗಿಸಿಕೊಂಡು ಅಭಿವ್ಯಕ್ತಿಸಿದ ವಿಶಿಷ್ಟ ಭಾವಬಿಂಬ ಅದು. ಭಾವಚಿತ್ರಕಾರನೊಬ್ಬ ತನ್ನ ಮುಂದೆ ಕುಳಿತಿರುವ 'Model'ನ 'ವ್ಯಕ್ತಿತ್ವದ ವಿಶಿಷ್ಟ ಒಳನೋಟ' ಗ್ರಹಿಸುವ ಸಾಮಾನ್ಯ ಸಾಮರ್ಥ್ಯ ಹೊಂದಿರಬೇಕು ; ಕೇವಲ ಹೊರಗಿನ ನೈಜ ರೂಪ ಅಲ್ಲ. ಆರ್.ಎಮ್.ಹೆಚ್. ಅದನ್ನು ಸಾಧಿಸಿದವರು. ಆರ್.ಎಸ್.ಎನ್. ರವರ ಕನ್ನಡಕದ ಹಿಂದಿನ ಕಣ್ಣಿನಲ್ಲೂ "ಅತೃಪ್ತಿ" ತುಟಗಳಲ್ಲಿ "ಅಸಹನೆ"ಗಳು ನೋಡುಗರಿಗೆ ಅನುಭವವಾಗುವಂತೆ ಅವರು ಚಿತ್ರಿಸಿದ್ದಾರೆ!

ಅಸಾಮಾನ್ಯ ಸಂವೇದನಾಶೀಲರಾದ ಆರ್.ಎಸ್.ಎನ್. ಚಡಪಡಿಸುತ್ತಿದ್ದವರು; ಚಕಚಕನೆ ನಡೆದುಕೊಳ್ಳುತ್ತಿದ್ದವರು. ದೃಶ್ಯಕಲೆಯನ್ನು ತಮ್ಮ ಅಭಿವ್ಯಕ್ತಿಗೆ ದುಡಿಸಿಕೊಳ್ಳಲು ಹಲವು ಸಂದರ್ಭ, ಹಂತಗಳನ್ನು ಎದುರಿಸಿ ಬಂದಿದ್ದರು. ಆರ್.ಎಸ್.ಎನ್. ಬೆಂಗಳೂರು, ಮೈಸೂರಿನ ಬುದ್ಧಿಜೀವಿಗಳಿಗೆಲ್ಲಾ ಸಾಕಷ್ಟು ಹತ್ತಿರವಾಗಿದ್ದವರು ಅದಕ್ಕೆ ಬಹುಮುಖ್ಯವಾದ ಒಂದು ಕಾರಣ, ಅವರ ಮಾರ್ಕ್ಸ್‌ವಾದಿ ದೃಷ್ಟಿ. ಹೀಗಾಗಿ ಹಲವರನ್ನು ತಲುಪಿದ್ದ ಅವರ ರೇಖಾಚಿತ್ರಗಳು, ಪುಟ್ಟಪುಟ್ಟ ಶಿಲ್ಪಗಳು ದಂತಕತೆಯಂತೆ ಎಲ್ಲರ ಬಾಯಲ್ಲೂ ಇರುತ್ತಿದ್ದವು. ಇಂತಹ ವಿಶಿಷ್ಟ ರಂಗಸ್ವಾಮಿ ಸೀತಾಪತಿ ನಾಯ್ಡು ಅಂದರೆ ಆರ್.ಎಸ್.ಎನ್. ಹುಟ್ಟಿದ್ದು ಬೆಂಗಳೂರಿನಲ್ಲಿ[3] ತಂದೆ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ತಮಿಳುನಾಡಿನ ತಿರುಚಿನಾಪಲ್ಲಿಯಲ್ಲಿದ್ದ ಅಜ್ಜ ನಿವೃತ್ತ ಸೇನಾಧಿಕಾರಿ ಹಾಗಾಗಿ ಅಜ್ಜನ ಊರಿನಲ್ಲಿ ಬಾಲ್ಯ, ವಿದ್ಯಾಭ್ಯಾಸ ನಡೆದವು; ಬೆಂಗಳೂರಿನಲ್ಲೂ ನಂತರ ಧಾರವಾಡದ ಕರ್ನಾಟಕ ಕಾಲೇಜು ಹಾಗೂ ಪುಣೆಯ ಫರ್ಗುಸನ್ ಕಾಲೇಜುಗಳಲ್ಲಿ ಮುಂದುವರೆಯಿತು. ವಿಜ್ಞಾನ ವಿಷಯವನ್ನು

3. ಬ್ಯಾಲೆಗೆ ಭ್ರಮಿಸಿದ ಆರ್.ಎಸ್.ಎನ್. ; ಪುಟ 13

ಪ್ರಧಾನವಾಗಿ ಅಧ್ಯಯನ ಮಾಡಿದ್ದರೂ ಈ ಮೊದಲೇ ಉಲ್ಲೇಖಿಸಿರುವಂತೆ ಸಾಹಿತ್ಯ, ದೃಶ್ಯಕಲೆ, ಮನಃಶಾಸ್ತ್ರ ಯೋಗ, ಇತ್ಯಾದಿ ಹಲವು ಆಸಕ್ತಿಗಳಲ್ಲಿ ತಲ್ಲೀನರಾಗಿದ್ದರು. ಇಂತಹ ಅವರ ತೀಕ್ಷ್ಣ ಬುದ್ಧಿ ಮತ್ತು ಅದ್ಭುತ ಜ್ಞಾಪಕ ಶಕ್ತಿಗಳು ಅವರ ವಿಶಿಷ್ಟ, ಪಾದರಸದಂತಹ ವ್ಯಕ್ತಿತ್ವಕ್ಕೆ ಕಾರಣ. ಎಲ್ಲದರ ಬಗ್ಗೆ ಹಲವು ರೀತಿಗಳಲ್ಲಿ ಯೋಚಿಸುವ ಶಕ್ತಿಯನ್ನು ಬಾಲ್ಯದಿಂದಲೇ ಮೈಗೂಡಿಸಿಕೊಂಡಿದ್ದರು. ಕ್ರೀಡೆಗಳಲ್ಲೂ ಉತ್ತಮ ಅಭಿರುಚಿ. ಅಣ್ಣ ಪ್ರೊ॥ ಜಗಪತಿನಾಯ್ಡುರಂತೆ ವಿಜ್ಞಾನಿಯೂ ಆಗಬಹುದಿತ್ತು. ದೃಶ್ಯಕಲೆಯನ್ನೇ ಪೂರ್ಣವಾಗಿ ಅಪ್ಪಿಕೊಂಡಿದ್ದರೆ ವಿಖ್ಯಾತ ಶಿಲ್ಪಿಯಾಗಬಹುದಿತ್ತು. (ಬಿ.ವಿ.ಕೆ. ಶಾಸ್ತ್ರಿ) ಆದರೆ ಅಚ್ಚರಿ ಎಂಬಂತೆ ಒಂಟ ಸಲಗದಂತಹ ಮನಸ್ಥಿತಿಯ ಆರ್.ಎಸ್.ಎನ್. ಕಾಲೇಜು ಶಿಕ್ಷಣದ ಸಂದರ್ಭದಲ್ಲಿಯೇ ರಾಜಕೀಯ ಸೆಳೆತಕ್ಕೆ ಸಿಕ್ಕಿಕೊಂಡರು. ಈ ಸೆಳೆತಕ್ಕೆ ಪ್ರಭಾವ ಬೀರಿದ ಸಂದರ್ಭ ಹಾಗೂ ವ್ಯಕ್ತಿಗಳ ಬಗ್ಗೆ ಬೆಳಕು ಬೀರುವ ಕೆಲಸವೂ ಆಗಬೇಕಿದೆ. ಗಾಂಧೀಜಿಯ ಆಕರ್ಷಣೆ ಇರಬಹುದೆ? ಈ ರಾಜಕೀಯ ಮಹತ್ವಾಕಾಂಕ್ಷೆಯ ಪಯಣದಲ್ಲಿ ಸ್ವಾರಸ್ಯವೂ ಇದೆ. ಸಾಧನೆ - ಸೋಲುಗಳೂ ಇವೆ. ದಂಡಿ ಸತ್ಯಾಗ್ರಹ; ಅದೇ ಸಂದರ್ಭದ ಸಮಾಜವಾದಿ ಯೂಸೂಫ್ ಮೆಹರಾಲಿಯವರ ಪರಿಚಯ ಆರ್.ಎಸ್.ಎನ್‌ರವರಿಗೆ ಆದದ್ದು ಆಪ್ತಸ್ನೇಹವೂ ಆಯಿತು. ಬ್ರಿಟೀಷ್ ದರಬಾರಿನ ಕಾಲವಲ್ಲವೇ? ಸತ್ಯಾಗ್ರಹಿ ಆರ್.ಎಸ್.ಎನ್. 6 ತಿಂಗಳ ಕಾಲ ಸ್ಥಾನಬದ್ಧರಾಗಿದ್ದರು. ಆ ನಂತರ 15 ತಿಂಗಳು ಯರವಾಡಾ ಜೈಲಿನಲ್ಲಿ ಸಜಾ ಶಿಕ್ಷೆ ಅನುಭವಿಸಿದರು. ಅನ್ಯಾಯದ ವಿರುದ್ಧವೇ ಅಲ್ಲದೆ, ಬ್ರಿಟೀಷರ ವಿರುದ್ಧವೂ ಬಂಡಾಯ ವೇಳಲು ಈ ಸಂದರ್ಭವೂ ಅವರನ್ನು ಪ್ರೇರೇಪಿಸಿತು. "C-ವರ್ಗದ ಕಠಿಣ ಶಿಕ್ಷೆ" ಅಂದರೆ ಜೋಳ ಬೀಸುವಿಕೆ. ತಪ್ಪು ಮಾಡಿದವರು ಮಾತ್ರ ಬರುವ ಜೈಲಿನಲ್ಲಿ, ಎಲ್ಲ ತಪ್ಪಿತಸ್ಥರಿಗೂ ಶಿಕ್ಷೆ ನೀಡುವ ಜೈಲಿನಲ್ಲಿಯೂ ಹಲವು ದರ್ಜೆಯ ಶಿಕ್ಷೆ! ಸತ್ಯಾಗ್ರಹಿಗಳಲ್ಲಿಯೂ ವರ್ಗಕ್ಕೆ ತಕ್ಕ ಶಿಕ್ಷೆ! ಸಮಾಜದ ಗಣ್ಯ ಸತ್ಯಾಗ್ರಹಿಗಳಿಗಿಂತಲೂ ಹಳ್ಳಿಗಳಿಂದ ಬಂದ ಬಡ ಸತ್ಯಾಗ್ರಹಿಗಳನ್ನು ಹೀನವಾಗಿ ನೋಡಿಕೊಳ್ಳುತ್ತಿದ್ದರು. ಆರ್.ಎಸ್.ಎನ್. "ನನ್ನ ರಕ್ತವೆಲ್ಲಾ ಈ ಅನ್ಯಾಯವನ್ನ ನೋಡಿ ಕುದಿಯುತ್ತಿತ್ತು; ಅವರನ್ನು ಪ್ರತಿಭಟಿಸುವಂತೆ ಪ್ರೇರೇಪಿಸಿದೆ. ಉಪವಾಸ ಮುಷ್ಕರವನ್ನು ಪ್ರಾರಂಭಮಾಡಿದೆವು," ಎಂದು ಹೇಳಿಕೊಂಡಿದ್ದಾರೆ. ಉಪವಾಸ ಮುಷ್ಕರವನ್ನು ನಿಲ್ಲಿಸಲು ಆರ್.ಎಸ್.ಎನ್. ರವರಿಗೆ ಮಹದೇವ ದೇಸಾಯಿ, ಜಮ್ನಾಲಾಲ್ ಬಜಾಜ್, ಅಂತಿಮವಾಗಿ ಗಾಂಧೀಜಿಯೇ ಹೇಳಿ ಕಳುಹಿಸಬೇಕಾಯಿತು ; ಶಿಕ್ಷೆಯ ಸಮಸ್ಯೆ ಬಗೆಹರಿಯಿತೆ? ಸ್ಪಷ್ಟವಾಗುವುದಿಲ್ಲ.

ಜೈಲಿನಿಂದ ಬಿಡುಗಡೆ : ಆರ್.ಎಸ್.ಎನ್‌ರವರ ಮನೋಧರ್ಮಕ್ಕೆ ತಲ್ಲಣದ ಸ್ಥಿತಿ ಸೇರಿಕೊಂಡಿತು. ಮುಂಬಯಿಯಲ್ಲಿ ಮಹಡಿಯಿಂದ ಜಿಗಿದು ಆತ್ಮಹತ್ಯೆಗೂ ಪ್ರಯತ್ನ. ಪುಸ್ತಕಗಳ ಮೊರೆ ಈ ಸಂದರ್ಭ ಅವರ ಮನಸ್ಸಿನಲ್ಲಿ ವಿಪ್ಲವವೊಂದರ ಆಸ್ಫೋಟಕ್ಕೆ ಕಾರಣವಾಯಿತು.

ಬ್ರಿಟೀಷ್ ಸರ್ಕಾರದ ವಿರುದ್ಧ ಯುವ ಜನತೆಯನ್ನು ಹುರಿದುಂಬಿಸಲು "ಕಾಂಗ್ರೆಸ್ ಸೋಷಿಯಲಿಸ್ಟ್" ಪತ್ರಿಕೆ ಪ್ರಾರಂಭವಾಯಿತು. ಈ ಕ್ರಾಂತಿಕಾರಿ ಪ್ರಕಟಣೆಯಲ್ಲಿ ಅವರ ಕೆಲಸವೇನೆಂದರೆ ವ್ಯಂಗ್ಯಚಿತ್ರ ಹಾಗೂ ಕ್ಯಾರಿಕೇಚರ್‌ಗಳ ಸೃಷ್ಟಿ. ಈ ಸೃಷ್ಟಿಗಳು ತಮ್ಮ ವ್ಯಂಗ್ಯದಿಂದಲೇ ಅಲ್ಲದೆ ವಿಡಂಬನೆಯಿಂದಾಗಿಯೂ ಹೆಚ್ಚಿನ ಜನಪ್ರಿಯತೆ ಪಡೆದವು.

ಮಾರ್ಕ್ಸ್‌ವಾದೀ 'social and political function of Art' ಆರ್. ಎಸ್. ನಾಯ್ಡುರವರಲ್ಲಿ ಸಾಧ್ಯವಾಯಿತು. [4]ಹಾಗಾಗಿಯೇ ಕಾಂಗ್ರೆಸ್ ಸಮಾಜವಾದಿಗಳ ಒಡನಾಟ. ಸ್ವಾತಂತ್ರ್ಯ ಪೂರ್ವ ಕಾಲ ; ಬ್ರಿಟೀಷ್ ಸರ್ಕಾರದ ಚಿತ್ರಗುಪ್ತರ ಹಿಂಸೆ. ನಾಯ್ಡುರವರು ಡಾ. ಅಶೋಕ್ ಮೆಹತಾ ಮತ್ತು ಬೆಹರಾಂರವರೊಂದಿಗೆ ಭೂಗತರಾದರು.

ಭೂಗತರಾದ ಆರ್.ಎಸ್.ಎನ್. ಅಲ್ಲಿನ ಕತ್ತಲಿನ ಬೆಳಕಿನಲ್ಲಿ ಹಲವಾರು ಕ್ರಾಂತಿಕಾರಿಗಳ ಬದುಕಿನ ಅಧ್ಯಯನ ಮಾಡುವಂತಾಯಿತು. Free pressಪತ್ರಿಕೆಯ ಸಂಪಾದಕ ಶ್ರೀನಿವಾಸನ್ ಹಾಗೂ ವಾಣಿಜ್ಯೋದ್ಯಮಿ ದೀಕ್ಷಿತ್‌ರವರುಗಳು ಆರ್.ಎಸ್.ಎನ್. ರೊಂದಿಗೆ ಆಗಾಗ ಸಮಾಲೋಚನೆಗಾಗಿ ಬಂದು ಹೋಗುತ್ತಿದ್ದರು. ಈ ನಡುವೆ ನಾಯ್ಡುರವರಿಗಾಗಿ ಬ್ರಿಟೀಷ್ ಬೇಹುಗಾರರ ಬಿಡುವಿಲ್ಲದ ಹುಡುಕಾಟ. ನಾಯ್ಡುರವರ ಸಾಂದರ್ಭಿಕ ಚಿತ್ರಗಳ ಜತೆ ಜತೆಗೇ ಕ್ಯಾರಿಕೇಚರ್‌ಗಳಲ್ಲೂ ಬ್ರಿಟೀಷ್ ಅಧಿಕಾರಿಗಳನ್ನು ಅಣಕಿಸುವಿಕೆ ಹೆಚ್ಚುತ್ತಾ ಹೋಯಿತು. ಸಿಕ್ಕಿಬಿದ್ದ ನಾಯ್ಡು ಕೆಲವು ತಿಂಗಳ ಶಿಕ್ಷೆ ಅನುಭವಿಸಿದರು ; ಶುದ್ಧ ರಾಜಕಾರಣದ ಆಸಕ್ತಿಯ ಬುದ್ಧಿಜೀವಿ ಮೆಹರಾಲಿ, ಮೀನು ಮಸಾನಿ, ಅಶೋಕ ಮೆಹ್ತಾರವರುಗಳೊಂದಿಗೆ ಸೇರಿಕೊಂಡರು.

ನಮ್ಮ ದೇಶದ ಅಂದಿನ ಆರ್ಥಿಕ ಸಂದರ್ಭದ ಬಗೆಗಿನ 'Pictorial Economics' ಸಚಿತ್ರ ವಾರಪತ್ರಿಕೆಯ ಪ್ರಕಟಣೆಯ ಪ್ರಾರಂಭ. ಅಕ್ಷರ ಸಾಹಿತ್ಯವನ್ನು ಓದಲು ಬಾರದವರಿಗೂ ವಿಷಯದ ಅರಿವು ಉಂಟಾಗುವಂತಹ ರೀತಿಯಲ್ಲಿ ಆರ್.ಎಸ್.ಎನ್. ರವರ ಚಿತ್ರಗಳು ಇರುತ್ತಿದ್ದವು. ಇಲ್ಲಿಯೂ ಮಾರ್ಕ್ಸ್‌ವಾದಿ ಧೋರಣೆಯಂತೆ ದೃಶ್ಯಕಲೆಯನ್ನು ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿಗಾಗಿ "ಕಲೆ ಜನರಿಗಾಗಿ" ಎಂಬಂತೆ ಆರ್.ಎಸ್.ಎನ್. ಬಳಸಿಕೊಂಡ ರೀತಿ ಆ ಸಂದರ್ಭಕ್ಕೆ ಒಂದು ಭಾರತೀಯ ಅಚ್ಚರಿ! ಇಲ್ಲಿ ಪತ್ರಿಕೆಯ ಇತರ ಗೆಳೆಯರ ಕೊಡುಗೆಗಳ ಜತೆ ಜತೆಗೇ ಆರ್.ಎಸ್.ಎನ್.ರವರ ಬುದ್ಧಿವಂತಿಕೆ ವಿಶೇಷ ರೀತಿಯಲ್ಲಿ ಕೆಲಸ ಮಾಡಿದೆ. Pictorial Economics ಪತ್ರಿಕೆಯ ಕ್ರಾಂತಿಕಾರಿ ವ್ಯಂಗ್ಯಚಿತ್ರಗಳು ನಮ್ಮಲ್ಲಿ ಮಾನ್ಯವಾದುದೇ ಅಲ್ಲದೆ ಇಂಗ್ಲೆಂಡಿನ ಕೆಲವು ಪತ್ರಿಕೆಗಳಲ್ಲೂ ಕಾಣಿಸಿಕೊಳ್ಳುತ್ತಿದ್ದವು!

ರಷ್ಯಾ ಭೇಟಿಯ ಕನಸು ಹೊತ್ತ ಆರ್.ಎಸ್.ಎನ್.1939ರಲ್ಲಿ ತಮ್ಮದೇ ವೆಚ್ಚದಲ್ಲಿ ಇಂಗ್ಲೆಂಡಿಗೆ ಹೊರಟರು. ಅಲ್ಲಿ ಇಳಿದ ನಂತರವೂ ಅಲ್ಲಿನ ಪೊಲೀಸರ ಬೆನ್ನಟ್ಟುವಿಕೆ ಇದ್ದೇ ಇದ್ದಿತು. ಅಲ್ಲಿಯೂ ಕಾರ್ಮಿಕರ ಸಹವಾಸ. ರಜನಿಪಟೇಲ್, ಕುಮಾರಮಂಗಲಂರಂತಹವರ ನೆರವೂ ಇದ್ದಿತು. ಎರಡನೆಯ ವಿಶ್ವಸಮರದ ಆರಂಭ. ರಷ್ಯಾ ಭೇಟಿಯ ಆಶಯ ನೆರವೇರಲಿಲ್ಲ; ಹಿಂತಿರುಗಿದರು. ಮುಂಬಯಿಯಲ್ಲಿ ಕೆಲವು ವರ್ಷಗಳ ವಾಸದ ನಂತರ ಗಡಿಬಿಡಿ, ಗಾಬರಿ, ಆತಂಕ ಇತ್ಯಾದಿಗಳ ಒತ್ತಡದಲ್ಲಿ ಬೆಂಗಳೂರಿಗೆ ಬಂದೇ ಬಿಟ್ಟರು! ಮಡಿವಾಳದಲ್ಲಿ ವಾಸ 1957ರಲ್ಲಿ ಮೈಸೂರಿಗೆ ಹೋಗಿ ನಗರದ ಹೊರ ವಲಯದ ಹಳ್ಳಿಯಲ್ಲಿ ಗುಡಿಸಲಿನಂತಹ ಮನೆಯಲ್ಲಿ ಸಾಮಾನ್ಯರ ನಡುವೆ ವಾಸಮಾಡಲಾರಂಭಿಸಿ ಎಲ್ಲರೊಂದಿಗೂ ಬೆರೆತು ಹೋದರು.

---


4. ವಿವರಗಳಿಗೆ ಗಮನಿಸಿ : 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ' , ಲೇ : ಕೆ. ವಿ. ಸುಬ್ರಹ್ಮಣ್ಯಂ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, 2007.

ತಲ್ಲಣದ ಬಡಲಾಳ : 2

ಸುತ್ತಲಿನ ಎಲ್ಲವನ್ನು ಎಲ್ಲರನ್ನೂ ಸೂಕ್ಷ್ಮ ದೃಷ್ಟಿಯಿಂದ ತೀವ್ರತೆಯಿಂದ ನೋಡುತ್ತಿದ್ದ ಆರ್.ಎಸ್.ಎನ್. ತಾವು ಒಬ್ಬರೇ ಇದ್ದು ಬಿಟ್ಟರು. ತಮ್ಮ ಬದುಕನ್ನು ಬಯಲು ಆಲಯದಂತಾಗಿಸಿದರು. ಮೈಸೂರು ಆ ಸಂದರ್ಭದಲ್ಲಿ ಇಂದು ನಾವು ಕನ್ನಡ ದೃಶ್ಯ ಕಲಾ ಇತಿಹಾಸದಲ್ಲಿ ಕಾಣುವ ಹಲವಾರು ಕಲಾವಿದರನ್ನು ನೋಡಿಕೊಳ್ಳುತ್ತಿತ್ತು. ಚಿತ್ರ-ಶಿಲ್ಪ ಸೃಷ್ಟಿಗಳೇ ಅಲ್ಲದೆ ಅಂದಿನ ಕಲಾವಿದರ ಕಲಾ ರಂಗದ ರಾಜಕಾರಣವನ್ನೂ ಕಂಡಿದ್ದ ಆರ್.ಎಸ್.ಎನ್. ತಮ್ಮಷ್ಟಕ್ಕೆ ತಾವೇ ಇದ್ದು ಬಿಟ್ಟರು. ಏಕಾಂತವಾಸ ಅಥವಾ ಒಬ್ಬೊಂಟಿಯಾಗಿರುವ ಬಹುತೇಕ ಕಲಾವಿದರು, ಕಲಾವಿದೆಯರು, ಹಾಗೂ ಸಾಹಿತಿಗಳನ್ನು split personality ಕಾಡಿದೆ. ಸಂಸ, ಎಸ್.ನಂಜುಂಡಸ್ವಾಮಿ, ಆರ್.ಎಸ್.ಎನ್. ರವರುಗಳನ್ನು ಈ ವಿಶಿಷ್ಟ ವ್ಯಕ್ತಿತ್ವ ಕಾಡಿದ್ದು ಉಂಟು. ವೈವಿಧ್ಯಮಯ ವಿಷಯ ಭಂಡಾರದ ಆರ್.ಎಸ್.ಎನ್. ಬಂದವರೊಡನೆ ಮಾತಿಗೆ ಕುಳಿತಾಗ ನಡು ನಡುವೆ ತಲೆಯಲ್ಲಿ ಯಾವುದೋ ಆತಂಕ ಉಂಟಾದಂತಾಗಿ "ಹಾಳು ಆ ಕುಳ್ಳ ತಲೆ ಮೇಲೆ ಹೊಡೀತಾನೆ" ಎಂದು ಹೇಳುತ್ತಿದ್ದರು. ಪಿ.ಆರ್.ಟಿ. ಯವರ ದಾಖಲೆ ಈ ದೃಷ್ಟಿಯಿಂದ ಗಣನೀಯ. ಪಿ.ಆರ್.ಟಿ. "ತಮಗೆ ಭಯವಾಯಿತು" ಎಂದು ಹೇಳಿಕೊಂಡಿದ್ದಾರೆ. "ಭೂತ ಚೇಷ್ಟೆ ನನ್ನ ಮೇಲೆ ಬಂದಿದೆ. ಇದು ನನ್ನ ಜೀವನದ ಮೇಲೂ ನನ್ನ ಕಲೆಯ ಅಭಿವ್ಯಕ್ತಿಯ ಮೇಲೂ ಪ್ರಭಾವ ಬೀರಿದೆ. ಇದರ ಉಪದ್ರವ ಸಹಿಸಲಾರೆ. ಈ ಬಗ್ಗೆ ನೆಹರೂರವರಿಗೆ ಪತ್ರ ಬರೆದಿದ್ದೇನೆ ಓದಿ,"ಎಂದು ಪತ್ರವನ್ನು ಕೈಗೆ ಕೊಟ್ಟಿದ್ದರಂತೆ. ಇನ್ನೂ ಮುಂದುವರಿದು ನಾಯಿಡುರವರು "ಇದು ಸುಳ್ಳು ಎಂದು ತಿಳಿಯಬೇಡಿ; ಬೇಕಾದರೆ ವಿಚಾರಣೆಗೆ ಒಂದು ಸಂಸ್ಥೆ ಗೊತ್ತು ಮಾಡಿ" ಎನ್ನುತ್ತಿದ್ದರೆಂದು ತಿಪ್ಪೇಸ್ವಾಮಿಯವರು ದಾಖಲಿಸಿದ್ದಾರೆ. ಒಂದು ರೀತಿಯ ಮನೋವೈಕಲ್ಯ 'Persecution Mania' ಅಥವಾ Shizophrenia (unable to relate their thoughts and feelings to what is happening around them.) ಸ್ಥಿತಿ. ಬದುಕಿನಲ್ಲಿ ಕುಗ್ಗಿ ಹೋದ ಆತಂಕ. ಸಂಸರದೂ ಹಾಗೆಯೇ "ತನ್ನನ್ನು ಪೊಲೀಸರು ಅಟ್ಟಿಸಿಕೊಂಡು ಬರುತ್ತಿದ್ದಾರೆ. ನನ್ನ ಕಲಾಕೃತಿಗಳನ್ನು ಕದ್ದು ಪ್ರಕಟಿಸಿದವರೇ ನನ್ನ ಮೇಲೆ ಕೃತಿ ಚೌರ್ಯ ಆಪಾದನೆ ಹೊರಿಸುತ್ತಿದ್ದಾರೆ." ಎನ್ನುತ್ತಿದ್ದರಂತೆ ; ಬಾಗಿಲು ತೆರೆಯಲು ಹೆದರಿಕೊಳ್ಳುತ್ತಿದ್ದರು. ಇರಲಿ. ನಾಯುಡು ಅಂತಹ ವಿಕ್ಷಿಪ್ತ ಸಂದರ್ಭದಲ್ಲಿ ಶಿಲ್ಪ ಸೃಷ್ಟಿ ಪ್ರಕ್ರಿಯೆಯಲ್ಲಿ ನೆಮ್ಮದಿ ಹುಡುಕಿಕೊಳ್ಳಲು ಪ್ರಯತ್ನಿಸಿದಂತಿದೆ. ಈ ಹಿಂದೆಯೇ ನಾಸಿಕ್ ಜೈಲಿನಲ್ಲಿ 4 ಅಡಿ ಎತ್ತರದ ಲೆನಿನ್ ಶಿಲ್ಪ ಸೃಷ್ಟಿಸಿರಲಿಲ್ಲವೆ? ಇಲ್ಲೂ ತಮ್ಮ ಆಶಯಕ್ಕೆ ಪೂರಕವಾದ ಹಾಗೂ ಸಾಂಸ್ಕೃತಿಕ ರಂಗದ ಖ್ಯಾತರ ಶಿಲ್ಪಗಳನ್ನು ಸೃಷ್ಟಿಸಿದರು. ಮಾರ್ಕ್ಸ್‌ವಾದಿ ಕಲೆಯ ಉದ್ದೇಶದಂತೆ ಅಂದರೆ 'art is a form of social production' ಎಂಬ ನಂಬಿಕೆಯಂತೆ ನಾಯುಡು ಸೃಷ್ಟಿಸಿದರೆ? ಎಂಬ ಬಗ್ಗೆ ದೃಷ್ಟಿಹರಿಸಬಹುದಾಗಿದೆ. ಮೇಲ್ನೋಟಕ್ಕೇ ಹೌದು ಎನ್ನಿಸುತ್ತದೆ.




ಪ್ಯಾಬ್ಲೊನೆರೊಡ
ರೇಖಾಚಿತ್ರ : ಆರ್.ಎಸ್.ಎನ್



ಬರ್ಟ್ರಾಂಡ್ ರಸೆಲ್
ರೇಖಾಚಿತ್ರ : ಆರ್.ಎಸ್.ಎನ್



ಚಾರ್ಲ್ಸ್ ಡಿಕೆನ್ಸ್
ರೇಖಾಚಿತ್ರ : ಆರ್.ಎಸ್.ಎನ್



ಥಾಮಸ್ ಹಾರ್ಡಿ
ರೇಖಾಚಿತ್ರ : ಆರ್.ಎಸ್.ಎನ್

ಜರ್ಮನಿಯ marxist ವಿಮರ್ಶಕ ವಾಲ್ಟರ್ ಬೆಂಜಮಿನ್‌ನ 'The author as producer' ಕೃತಿ 1934 ರಲ್ಲಿ ಪ್ರಕಟವಾಯಿತು. ಅವನು"the revolutionary artist should not uncritically accept the existing forces of artistic production, but should develop and revolutionalize those forces. In doing so he creates new social relations between artist and audience... the revolutionary artist's task is to develop these new media as well as transform the older modes of artistic production. It is not just a question of pushing a revolutionary 'message' through existing media; it is a question of revolutionalizing the media themselves" ಎನ್ನುತ್ತಾನೆ. ಆರ್.ಎಂ. ಹಡಪದ್ ಇದೇ ದೃಷ್ಟಿ ಹೊಂದಿದ್ದರು. ಅವರ ಸಂದರ್ಭದ ಹಿನ್ನೆಲೆಯಲ್ಲಿ ಇದನ್ನು ಸಾಧಿಸಲಾಗಲಿಲ್ಲ ಅಷ್ಟೇ. ಅದೇ ಸಂದರ್ಭದಲ್ಲಿದ್ದ ಆರ್.ಎಸ್.ನಾಯ್ಡು ಸಾಧಿಸಿಯೇ ಬಿಟ್ಟರು! ಅವರ ಪ್ಲಾಸ್ಟರ್ ಶಿಲ್ಪಗಳು ಪೋಸ್ಟ್‌ಕಾರ್ಡ್ ಚಿತ್ರಗಳು ಯಾರನ್ನು ತಲುಪಬೇಕೋ ಅವರಿಗೆ ತಲುಪಿ ತಮ್ಮ ಉದ್ದೇಶವನ್ನು ಸಾಧಿಸಿಕೊಂಡವು. ಅಮೆರಿಕದ ಆಂಡಿ ವಾರ್ಹೋಲ್ ತನ್ನ ಸ್ಟುಡಿಯೋವನ್ನು "The Factory" ಎಂದೇ ಕರೆಯುತ್ತಿದ್ದುದನ್ನು ಹಾಗೂ ಜನಸಾಮಾನ್ಯರಿಗೂ ಅವನ ಪ್ರಿಂಟ್‌ಗಳು ತಲುಪುತ್ತಿದ್ದುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದಲ್ಲವೆ? ಹಾಗೆಯೇ ರಾಜಾ ರವಿವರ್ಮಾ ಸಹ ತಮ್ಮ ಉದ್ದೇಶ ಸಾಧಿಸಲು ಓಲಿಯೋಗ್ರಾಫ್ ಪ್ರಿಂಟ್‌ಗಳನ್ನು ಇಡೀ ದೇಶದಲ್ಲಿ ಎಲ್ಲ ವರ್ಗದ ಮನೆಗಳನ್ನೂ ಸೇರುವಂತೆ ನೋಡಿಕೊಂಡರು; ಅದೊಂದು ಕ್ರಾಂತಿಯೇ ಸರಿ. ಹೇಗಾದರೂ ಆರ್.ಎಸ್.ಎನ್.ರವರ ಬಹುಪಾಲು ಶಿಲ್ಪಗಳು ಬೆಂಜಮಿನ್‌ನ 'artist producer' ದೃಷ್ಟಿಗೆ ಹತ್ತಿರವಾಗಿವೆ. ರಷ್ಯಾದೇಶದ ಬಹುತೇಕ ಮಹಾನ್ ವ್ಯಕ್ತಿಗಳೆಲ್ಲರ ರೂಪಗಳು ನಾಯುಡುರವರ ಪ್ಲಾಸ್ಟರ್ ಆಫ್ ಪ್ಯಾರೀಸ್ ಶಿಲ್ಪಗಳಲ್ಲಿ ಹಲವು ಸಂಖ್ಯೆಗಳಲ್ಲಿ reproduce ಆಗಿ ಎಲ್ಲ ಕಡೆ ಈಗಾಗಲೇ ಹೇಳಿರುವಂತೆ ತಮ್ಮ ಉದ್ದೇಶ ಸಾಧಿಸಲು ಸೇರಿಕೊಂಡವು. ಸಮೂಹ ಮಾಧ್ಯಮದ, ಸಾಂಸ್ಕೃತಿಕ ರಂಗದ ಹಲವರ ಬಳಿ ನಾಯ್ಡುರವರ ಶಿಲ್ಪಗಳನ್ನು ಇಂದಿಗೂ ನೋಡಬಹುದಾಗಿದೆ. ಬುದ್ಧ, ಬೇಂದ್ರೆ, ಕೈಲಾಸಂ, ಕುವೆಂಪು, ಶಿವ, ಕ್ರಿಸ್ತ, ಟಾಲ್‌ಸ್ಟಾಯ್, ಮ್ಯಾಕ್ಸಿಂಗಾರ್ಕಿ, ಬರ್ನಾಡ್‌ಷಾ, ಕವಿ ಮಾಯ ಕೋವ್‌ಸ್ಕಿ, ಪ್ರೇಮ್‌ಚಂದ್, ವಲ್ಲತೋಳ್, ತಮಿಳು ಕ್ರಾಂತಿಕಾರಿ ಕವಿ ಸುಬ್ರಮಣ್ಯ ಭಾರತಿ, ಆನಂದ ಕುಮಾರಸ್ವಾಮಿ, ಅರವಿಂದರು, ಬಿ.ಎಂ.ಶ್ರೀ, ಮೊದಲಾದ ಹಲವರ ಭಾವಶಿಲ್ಪಗಳು ಮೂಡಿ ಬಂದವು.

ಆ ಸಂದರ್ಭದಲ್ಲಿ ಮೈಸೂರಿನ ಅರಮನೆಯಲ್ಲಿದ್ದ ವೆಂಕಟಪ್ಪನವರ ಉಬ್ಬುಶಿಲ್ಪ ನಾಯ್ಡುರವರನ್ನು ಪ್ರಭಾವಿಸಿರಬೇಕು. ಅವರ ಬುದ್ಧನ ಗ್ರಹಿಕೆ ವೆಂಕಟಪ್ಪನವರನ್ನು ನೆನಪು ಮಾಡುತ್ತದೆ. ಬಿ.ವಿ.ಕೆ.ರವರು ಆರ್.ಎಸ್.ಎನ್.ರವರನ್ನು "ತೋರಮಾಣಿಕವೆಂದು ಪಿಡಿದರೆ ಭೂರಿ ಕೆಂಡವಿದಾಯ್ತು" ಎನ್ನುವಂತೆ ವರ್ಣಿಸುತ್ತಾರೆ. ಇದೇ ರೀತಿಯ ಅತಿ ಬಿಗಿಯಾದ ನಡವಳಿಕೆಯ ವೆಂಕಟಪ್ಪನವರ ಸಂಪರ್ಕ ಮೈಸೂರಿನಲ್ಲಿ, ಹೆಚ್ಚಾಗಿ ಬೆಂಗಳೂರಿನಲ್ಲಿ ಸಾಧ್ಯವಾಯಿತೆ? ಅಗತ್ಯ ಅನ್ನಿಸಲಿಲ್ಲವೇ? ಅಥವಾ ಅವರ

ಪ್ಲಾಸ್ಟರ್ ಶಿಲ್ಪಗಳು ಸ್ಫೂರ್ತಿ ನೀಡಿದವೆ? ಗೊತ್ತಿಲ್ಲ. ಆದರೂ ಈಗಾಗಲೇ ಹೇಳಿರುವಂತೆ ಅವರ "ಬುದ್ಧ" ಶಿಲ್ಪದ ಹಾವಭಾವ, ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ ಮಾಧ್ಯಮದ ನಿರ್ವಹಣೆ ವೆಂಕಟಪ್ಪನವರನ್ನು ನೆನಪು ಮಾಡುತ್ತವೆ. ಸಂವೇದನಾಶೀಲರಾದ ಆರ್‌ಎಸ್‌ಎನ್ ವೆಂಕಟಪ್ಪನವರಿಂದ ವಿಶಿಷ್ಟದೂರ ವನ್ನು ಕಾಯ್ದುಕೊಂಡಂತಿದೆ. ಅಚ್ಚರಿಯೆಂದರೆ RSN ಮೈಸೂರಿಗೆ ಹೊರಟ 1957ರಲ್ಲಿ ಬೆಂಗಳೂರಿನಲ್ಲಿದ್ದ ವೆಂಕಟಪ್ಪನವರು (4-1-1957) ಲೆನಿನ್ ಬಗ್ಗೆ ಪುಸ್ತಕವೊಂದನ್ನು ಓದಿ ಮುಗಿಸಿದುದಾಗಿ ತಮ್ಮ ದಿನಚರಿಯಲ್ಲಿದಾಖಲಿಸಿದ್ದಾರೆ.


ತಮ್ಮ ದಿನನಿತ್ಯದ ಎಲ್ಲ ಕೆಲಸಗಳನ್ನು ತಾವಾಗಿಯೇ ಮಾಡಿಕೊಳ್ಳುವ ಅನಿವಾರ್ಯತೆ ಅವರಿಗಿತ್ತು. ಕೆಲವೊಮ್ಮೆ ತಲ್ಲಣದ ಮನಸ್ಥಿತಿಯ ಸಂದರ್ಭದಲ್ಲಿ ಬೇಸರವಾದಾಗ ಲೇಖನಿಯಿಂದ ಮಿತ್ರರಿಗೆ, ಪರಿಚಿತರಿಗೆ ಕಾರ್ಡಿನಲ್ಲಿ ರೇಖಾಚಿತ್ರಗಳನ್ನು, ಒಕ್ಕಣೆಗಳನ್ನು ಬರೆದು ಪೋಸ್ಟ್ ಮಾಡುವ ಹವ್ಯಾಸ ಇಟ್ಟುಕೊಂಡಿದ್ದರು. ಆರ್.ಎಸ್.ಎನ್. ರವರ ಇಂತಹ ಕಾರ್ಡು, ಇನ್‌ಲ್ಯಾಂಡ್ ಲೆಟರ್, ಲಕೋಟೆಯಲ್ಲಿಟ್ಟ ಪತ್ರ ಇತ್ಯಾದಿಗಳನ್ನು ಸಂಗ್ರಹಿಸಿ ಇಡುವುದೇ ಕೆಲವು ಮಿತ್ರರಿಗೆ ಸಂತೋಷದ ಸಂಗತಿಯಾಗಿತ್ತು. ಕೆಲವರ ಬಳಿ ಒಂದೇ ಶಿಲ್ಪದ ಎರಡೆರಡು ನಕಲುಗಳೂ ಇರುತ್ತಿದ್ದವು. ರವಿವರ್ಮರ ಪ್ರಿಂಟ್‌ಗಳ ನಂತರ ಸ್ವಲ್ಪಮಟ್ಟಿಗೆ ಆಸಕ್ತರನ್ನು ತಲುಪುವ ಪ್ರಯತ್ನ ಮಾಡಿದವರಲ್ಲಿ ನಾಯ್ಡು ಗಣನೀಯರಾಗಿದ್ದಾರೆ. ಆ ಹೊತ್ತಿಗೆ ಕೊಲ್ಕತ್ತೆಯಲ್ಲಿ ಉಡ್‌ಕಟ್ ಪ್ರಿಂಟ್‌ಗಳೂ ಈ ಉದ್ದೇಶ ಸಾಧಿಸಿದ್ದವು. ಜಪಾನಿನಿಂದ ಬಂದಿದ್ದ ಒಕಾಕರ ಎಂಬುವವರು ಇಲ್ಲಿ ನೆನಪಾಗುತ್ತಾರೆ. 2007ರ ಸಂದರ್ಭದಲ್ಲಿಯೂ ಧಾರವಾಡದ ಸಿದ್ದಲಿಂಗಪಟ್ಟಣಶೆಟ್ಟಿಯವರು ಬೆಂಗಳೂರಿನ ಸಾಹಿತಿಯೊಬ್ಬರು ತಮಗೆ ಕೊಟ್ಟ ನಾಯ್ಡುರವರ ಕೈಲಾಸಂ ಶಿಲ್ಪದ ಬಗ್ಗೆ ಈ ಲೇಖಕನಲ್ಲಿ ಸಂತೋಷದಿಂದ ಪ್ರಸ್ತಾಪಿಸಿದ್ದೂ ಉಂಟು.

ಕಲಾ ಸಂಸ್ಥೆಗಳ ಬಗ್ಗೆ ನಾಯ್ಡುರವರಿಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ಲಲಿತಕಲಾ ಅಕಾಡೆಮಿಯ ಬಗ್ಗೆಯೂ ಅಷ್ಟೆ. ಪಿ.ಆರ್.ತಿಪ್ಪೇಸ್ವಾಮಿಯವರಿಗೆ ಮಾತಿನ ನಡುವೆ ಅವರು "ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಆಗುತ್ತಿದ್ದಂತೆ ಅಲ್ಲಿಯೂ ಪಕ್ಷಪಾತಗಳು ತಾನೆ?" ಎಂದು ಛೇಡಿಸಿದ್ದೂ ಉಂಟು. ದಸರ ಕಲಾ ಪ್ರದರ್ಶನದ ಮಟ್ಟ ಪ್ರಾರಂಭದ ವೈಭವದ ದಿನಗಳಲ್ಲಿ ಇದ್ದಂತೆ ಇರುತ್ತಿರಲಿಲ್ಲ. ಇರಲಿ. ಪಿ. ಆರ್. ಟಿ. ಯವರು ಲಲಿತಕಲಾ ಅಕಾಡೆಮಿಯ ಸದಸ್ಯರು, ಅಧ್ಯಕ್ಷರೂ ಆಗಿದ್ದವರು. ಆರ್‌ಎಸ್‌ಎನ್ ತಮ್ಮ ಸುತ್ತಲಿನ ಎಲ್ಲರೂ ದೃಶ್ಯಕಲೆಯ ಕುರಿತ ಜ್ಞಾನವನ್ನು ಉನ್ನತ ಹಂತದಲ್ಲಿ ಹೊಂದಿರಲೆಂಬ ಆಶಯ ಹೊಂದಿದ್ದವರು. ಹಾಗಾಗಿಯೇ ಎಲ್ಲ ಆಸಕ್ತರಿಗೂ ಅವರು ಹಲವು ರೀತಿಗಳಲ್ಲಿ, ದೃಶ್ಯ ಸಂಸ್ಕೃತಿಯ ಸಾಕ್ಷರತೆಗೂ ನೆರವಾಗುತ್ತಿದ್ದರು. ಇದೊಂದು ಅವರ ಬದುಕಿನ ಒಂದು ವಿಶಿಷ್ಟ ಪುಟ. ಪಿ.ಆರ್.ಟಿ. ಯವರು ನಮ್ಮ ದೃಶ್ಯಕಲೆಯ ಮಾತು ಪ್ರಸ್ತಾಪಿಸಿದಾಗೊಮ್ಮೆ ಆರ್.ಎಸ್.ಎನ್. "ಅರ್ಧ ಶತಮಾನದಿಂದ ವಿಶ್ವದಲ್ಲಿ ನವ್ಯಕಲೆಯ ಪ್ರಯೋಗಗಳು ನಡೆಯುತ್ತಿವೆಯಾದರೂ ಅಂತಿಮವಾಗಿ ಅವೆಲ್ಲಾ ಯಾವ ರೂಪು ತಾಳುತ್ತವೆಯೋ ನೋಡಬೇಕಾಗಿದೆ; ಮನೆಗೆ ಬನ್ನಿ "ಪೋಲ್ಯಾಂಡ್" ಸಂಚಿಕೆಗಳನ್ನು ಇರಿಸಿರುವೆ, ಅವುಗಳಲ್ಲಿ ಅಲ್ಲಿನ ನವ್ಯಕಲೆ ಯಾವ

ಸ್ವರೂಪ ತಾಳಿದೆ ಎಂಬುದು ಆಶ್ಚರ್ಯವನ್ನುಂಟು ಮಾಡುತ್ತದೆ". ಎಂದು ಹೇಳುತ್ತಿದ್ದರೆಂದು ಪಿ.ಆರ್.ಟಿ. ದಾಖಲಿಸಿದ್ದಾರೆ. ಆರ್.ಎಸ್.ಎನ್. ರವರ ಕಾರ್ಟೂನ್, ರೇಖಾಚಿತ್ರಗಳಲ್ಲಿ ಪೋಲ್ಯಾಂಡ್ ದೇಶದ 'Independent' ಪತ್ರಿಕೆಯ ಕಾರ್ಟೂನಿಸ್ಟ್ ಆಗಿದ್ದ Ronald Neibur,('Goebbels and hittler', Daily Mail 26-8-1941 ಗಮನಿಸಿ) ಹಾಗೂ Nicholas Garland ರವರುಗಳ ಹೋಳಹುಗಳಿವೆ. ಆ ಸಂದರ್ಭದ Agostino carracci ಎಂಬುವವನೂ ಸಹ ತನ್ನ ಆಪ್ತರು, ಗೆಳೆಯರು, ಹಾಗೂ ಅಭಿಮಾನಿಗಳಿಗೆ ಆರ್.ಎಸ್.ಎನ್.ರವರ ರೀತಿಯ ರೇಖಾಚಿತ್ರಗಳನ್ನು ಕಳುಹಿಸಿಕೊಡುತ್ತಿದ್ದನು. ಅವನ ಚಿತ್ರಗಳಲ್ಲಿ ವಿಡಂಬನೆ ಹಾಗೂ ಕುಶಲತೆಗಳು ಗಾಂಭೀರ್ಯದಿಂದ ಕಾಣಿಸಿ ಕೊಂಡಿವೆ. E.H. ಗ್ರೋಂಬ್ರಿಚ್‌ರ 'Uses of images' ನಲ್ಲಿ Garland ನ pictorial satire ಬಗ್ಗೆ ಚರ್ಚೆ ಇದೆ. ಕೊಲ್ಕತ್ತ ಅಲ್ಲಿನ ಗೆಳೆಯರು, ಕಲೆಯ ಸಂದರ್ಭ ಇವೆಲ್ಲವುಗಳು ಓನ್ನೆಲೆ ನಾಯ್ಡುರವರ ಚಿತ್ರ ಶಿಲ್ಪಗಳಿಗಿದೆ. ನಂದಲಾಲ ಬೋಸ್‌ರ ರೇಖೆಗಳು ಅದರಲ್ಲೂ ಅವರ ಮರಗೆತ್ತನೆಗಳ ರೇಖೆಗಳು ಆರ್.ಎಸ್.ಎನ್. ರವರನ್ನು ಕಾಡಿರುವಂತಿವೆ. ಗಾಂದೀಜೀಯವರನ್ನು ನಂದಲಾಲ್ ಬೋಸ್ ರೇಖಿಸಿರುವ ರೀತಿಯನ್ನು ಗಮನಿಸಿ.

ಏನೇ ಆಗಲಿ ವಿಶ್ವದ ಪ್ರಮುಖ ಕಲಾ ಕೇಂದ್ರಗಳ ಬೆಳವಣಿಗೆಗಳು ಆರ್.ಎಸ್.ಎನ್.ರವರ ಗಮನ ಸೆಳೆಯುವಂತಿದ್ದವು.

ಬೆಂಗಳೂರಿನ ಕೆ.ಆರ್.ಕೃಷ್ಣಸ್ವಾಮಿಯವರ ಕಲೆಯ ಕುರಿತ ಅಭಿಮಾನಕ್ಕೆ ಕನ್ನಡಿಗರು ಋಣಿಗಳಾಗಿರಬೇಕು. ಆರ್.ಎಸ್.ಎನ್.ರವರ ಚಿತ್ರ, ರೇಖಾಚಿತ್ರ ಹಾಗೂ ಶಿಲ್ಪಗಳು, ಉಬ್ಬುಶಿಲ್ಪಗಳು ಅವರ ಅಪೂರ್ವ ಸಂಗ್ರಹದಲ್ಲಿವೆ. ಕುವೆಂಪು ರೇಖಾ ಭಾವಚಿತ್ರ (9-4-1964ರ ದಿನಾಂಕ, ಹೊಂದಿದೆ) ಆರ್.ಎಸ್.ಎನ್. ಛಾಪಿನ ರೇಖೆಗಳನ್ನು ಹೊಂದಿದೆ. ಕಣ್ಣಿನ ಗಾಂಭೀರ್ಯದ ಅನುಭವ; ಧ್ಯಾನಸ್ಥ ಭಾವ. ಕೊಲ್ಕತ್ತೆಯ ಸಂಪರ್ಕ ಸಂದರ್ಭದ ರವಿಶಂಕರ್ ಸಿತಾರ್‌ವಾದನ ಅವರನ್ನು ಆಕರ್ಷಿಸಿದೆ. ಸಂಗೀತ- ಕಣ್ಣು ತುಟಿಗಳ ರೇಖಾಭಾವ ಕಲ್ಪನೆಯ ಲಹರಿ ಅದು. 1960ರ ಈ ರೇಖಾ ಚಿತ್ರದಲ್ಲಿ ರವಿ ಶಂಕರರ ಕೆನ್ನೆ-ಕಿವಿಯ ಬಳಿ ಹೆಣ್ಣಿನ ರೇಖಾ ಚಿತ್ರವಿದೆ! ಕೆ.ಆರ್. ಕೃಷ್ಣಸ್ವಾಮಿಯವರಿಗೆ ಕೊಡುಗೆಯಾಗಿ ನೀಡಿದ ಕೃತಿ ಇದು.



ಮತ್ತೊಂದರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದ ಜಯರಾಮನ್‌ರವರ ಕ್ಯಾರಿಕೇಚರ್ ರೇಖಿಸಿದ್ದಾರೆ. ಕೆಳಗೆ 'Always remember the sketch might have been worse! Love and Good will, Hullo' ಎಂದಿದ್ದಾರೆ. ದೊಡ್ಡದಾಗಿ ಕರಾಕೃರವರ ಹುಟ್ಟುಹಬ್ಬದ ಸಂದರ್ಭಕ್ಕೆ ಅವರ ಭಾವಚಿತ್ರವನ್ನು ರೇಖೆಗಳಲ್ಲಿ ಬಿಂಬಿಸಿದ್ದಾರೆ. 'Many return of the Happy birth day nobolity... Karakru." ಎಂದು ಬರೆದಿದ್ದಾರೆ.

VERRIER ELWIN ನ ಭಾವ ರೇಖಾಚಿತ್ರದಲ್ಲಿ ತುಟಿಯಲ್ಲಿ ಪ್ರೀತಿ ಸಂತೃಪ್ತಿಗಳಿವೆ. ಕಣ್ಣು ಅರ್ಪಣಾ ಮನೋಭಾವ ತುಂಬಿಸಿಕೊಂಡಿದೆ. 'to karakru' ಎಂದೇ ಆರ್.ಎಸ್.ಎನ್ ಬರೆದಿದ್ದಾರೆ. ಕಲೆಯ ವ್ಯಾಕರಣವನ್ನು ಯಾವುದೇ ಕಲಾ ಶಾಲೆಗಳಲ್ಲಿ ಕಲಿಯದೆಯೇ ಅವರೇ ರೂಢಿಸಿಕೊಂಡ ಶೈಲಿಯ ತೀವ್ರತೆ, ತೀಕ್ಷ್ಣತೆಯಿಂದ ಅವರ ರೇಖಾಚಿತ್ರಗಳಲ್ಲಿ, ಬಹುಮುಖ್ಯವಾಗಿ ಕ್ಯಾರಿಕೇಚರ್‌ಗಳಲ್ಲಿ ಕಾಣಿಸಿಕೊಂಡಿದೆ. ಅವರು ಕಂಡ ವ್ಯಕ್ತಿಗಳ ಪಿಡಂಬನೆ ಅವರದೇ ಆದ ತಲ್ಲಣಗಳ ಅನುರಣನ ಈ ರೇಖೆಗಳಲ್ಲಿದೆ. ಅವರ ಒಡಲಾಳದ ಪ್ರತಿರೂಪದಂತೆ. ಕ್ರಾಂತಿಗಾಗಿ ಬಾರಿಸಿದ ಚಂಡ ಮದ್ದಲೆಗಳ ಬಡಿತದ ಸತ್ವವನ್ನು ಈ ರೇಖೆಗಳು ಹೊಂದಿವೆ. ಕಪಿಯೊಬ್ಬನ ಕಾವ್ಯಮಯ ಭಾವಲಹರಿಯ ಲಯವನ್ನು ಒಳಗೊಂಡಿದೆ. ಕೆಲವೇ ರೇಖೆಗಳಲ್ಲಿ, ತುಟಿ ಹಾಗೂ ಕಣ್ಣಂಚಿನಲ್ಲಿ, ಹಣೆಯ ನಿರಿಗೆ ಇತ್ಯಾದಿಗಳಲ್ಲಿ ರೇಖಿಸುತ್ತಿದ್ದ ಒಂದೆರಡು ಕೊಂಕುಗಳು, ಬೀಸುಗಳು, ಇಡೀ ರೂಪಕ್ಕೆ ಒಂದು ಪಿಶಿಷ್ಟ ಆರ್.ಎಸ್.ಎನ್. ಎಂಬ ಜೀವಧ್ವನಿಯನ್ನು ನೀಡಿವೆ. ಅದ್ಭುತ ನಿರೂಪಣೆ, ಗತಿ, ಪಿನ್ಯಾಸಗಳನ್ನು ಸೂಚಿಸುವ ಮಿತವ್ಯಯದ ನೂತನ ಶೈಲಿಯ ಸಾಮರಸ್ಯ ಕಂಡುಬರುತ್ತದೆ. ಅವರ ವ್ಯಂಗ್ಯ ಪಿಡಂಬನೆ ಕೆಲವೊಮ್ಮೆ ಕಟುವೂ ಹಲವೊಮ್ಮೆ ನೈಜವೂ ಆಗಿರುತ್ತದೆ. ಗಾಂಧೀಜಿಯವರ ರೇಖಾ ಚಿತ್ರಗಳು ಈ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಬದುಕಿನ ಪ್ರಾರಂಭದ ವರ್ಷಗಳಲ್ಲಿ ಆರ್.ಎಸ್.ಎನ್. ಭಾರತೀಯ ಸಾಂಸ್ಕೃತಿಕ ರಂಗದ, ಆಲ್ಬರ್ಟ್ ಕಾಮು ಪಿವರಿಸುವ 'Rebelian' ಆಗಿದ್ದವರು. ನಂತರದಲ್ಲಿ ನವರಸಗಳನ್ನೂ ಅನುಭವಿಸಿ ಅರಗಿಸಿಕೊಂಡಿದ್ದ ಅವರ ಬದುಕು ಅವರ ಕೃತಿಗಳ ಮೂಲಕ ಅಭಿವ್ಯಕ್ತಗೊಂಡಿದೆ. ರೇಖೆಗಳಲ್ಲಿಯೇ ಹಲವು ಬಾವ ವೈವಿಧ್ಯಗಳನ್ನು ಆರ್.ಎಸ್.ಎನ್. ಸಾಧಿಸಿದ್ದಾರೆ.

ಗೌತಮಬುದ್ಧ : ಜೇಡಿ ಮಣ್ಣಿನ ಕೃತಿಯ ಪ್ಲಾಸ್ಟರ್ ಮಾಧ್ಯಮದ ಪಡಿಯಚ್ಚು ಹಣೆಗೆ ಬೊಟ್ಟು ಇಟ್ಟುಕೊಂಡಿರುವುದೊಂದು ಅಚ್ಚರಿ. ಕಣ್ಣು, ತುಟಿ, ಮೂಗು ಇತ್ಯಾದಿಗಳು ರಮ್ಯಕಾವ್ಯದ ಲಯಬದ್ಧ ರೇಖೆಗಳನ್ನು ಕುಶಲತೆಯಿಂದ ಅರಗಿಸಿಕೊಂಡಿವೆ.

ಸಂಗೀತದ ಅನುಭವ ನೀಡುವ ರೇಖಾ ಚಿತ್ರಗಳನ್ನು ರೇಖಿಸಿದ್ದಾರೆ. ಕಾರಾಕೃ ಹುಟ್ಟುಹಬ್ಬದ ಸಂದರ್ಭದ ಭಾವಚಿತ್ರದ ಎಡಬದಿಯಲ್ಲಿ ನಟರಾಜ ಶಿಲ್ಪದ ರೇಖಾರೂಪವಿದೆ. ಹಲವು ನೃತ್ಯ ಪ್ರಕಾರಗಳ ಜತೆ ಜತೆಗೇ ರಷ್ಯನ್ ಬ್ಯಾಲೆಯ ಬೆಡಗು ಅವರನ್ನು ಇನ್ನಿಲ್ಲದೆ ಆಕರ್ಷಿಸಿದ್ದು ಒಂದು ಅದ್ಭುತ ರಾಜಕಾರಣವೆ ಸರಿ! ಹಿಟ್ಲರ್ ಭೂದೃಶ್ಯಗಳನ್ನು ಚಿತ್ರಿಸಿರುವಂತೆ, ಈ ಕ್ರಾಂತಿಕಾರಿ ನೃತ್ಯದಲ್ಲಿ ನಿರತ ನರ್ತಕಿಯರ ಹಲವು ಭಾವ-ಭಂಗಿಗಳನ್ನು ಆಕರ್ಷಕವಾಗಿ ರೇಖಿಸಿರುವುದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಿದೆ. ನಾಯ್ಡು ಬ್ರಹ್ಮಚಾರಿ ಎನ್ನುವುದೂ ಇಲ್ಲಿ ನೆನಪಾಗುತ್ತದೆ! ಈ ಹಿಂದೆ ತಾನು ಕಂಡ ಹಲವಾರು ವರ್ಗದ ಹೆಣ್ಣುಗಳನ್ನು ಚಿತ್ರಿಸಿದ ಫ್ರಾನ್ಸ್‌ನ ಎಡ್ಗರ್ ಡೆಗಾ ಅಂತಿಮವಾಗಿ ಆಯ್ಕೆ ಮಾಡಿಕೊಂಡು ಜೀವಮಾನದ ಅಂತ್ಯದವರೆಗೂ ಬ್ಯಾಲೆ ನರ್ತಕಿಯರನ್ನು ಚಿತ್ರಿಸುತ್ತಲೇ ಬದುಕಿದ್ದ. ಹೆಬ್ಬಾರರ ರೇಖೆಗಳು, 'ಹಾಡುವ ರೇಖೆಗಳು', 'ಕುಣಿಯುವ ರೇಖೆಗಳು' ಎಂದೇ ಖ್ಯಾತವಾಗಿವೆ. ಹೆಬ್ಬಾರ್ ಬೆಂಗಳೂರಿನಲ್ಲಿ ಭರತನಾಟ್ಯ ನೋಡುತ್ತಲೇ ರೇಖೆಗಳಿಂದ ಗ್ರಹಿಸಿದ್ದರು.

ಆರ್.ಎಸ್.ಎನ್.ರವರು ಶಾಸ್ತ್ರೀಯ ನೃತ್ಯ ಪ್ರಕಾರವಾದ ಭರತನಾಟ್ಯ ಹಾಗೂ ಜನಪದ ನೃತ್ಯಗಳನ್ನು ತಮ್ಮ ಪತ್ರದ ಚಿತ್ರಗಳಲ್ಲಿ ಗ್ರಹಿಸಿದ್ದಾರೆ. "ಕೆಲವು ಚಿತ್ರಗಳಲ್ಲಿ ನಿರ್ದಿಷ್ಟವಾಗಿ ನರ್ತಕಿಯರನ್ನೂ ಗುರುತಿಸಬಹುದು." ಮಿತ ಪ್ರಮಾಣದ ರೇಖೆಗಳಲ್ಲಿಯೂ ನರ್ತಕಿಯ ಅಥವಾ ನೃತ್ಯದ ಬಾಹ್ಯ ಸೌಂದರ್ಯ ಮತ್ತು ಅಂತರ್ಗತವಾದ ಲಯದ ಚೈತನ್ಯ ಮುಂತಾದುವನ್ನು ಪರಿಣಾಮಕಾರಿಯಾಗಿ ಆರ್.ಎಸ್.ಎನ್ ಗ್ರಹಿಸಿದ್ದಾರೆ. ಹಾಗಾಗಿಯೇ ಅವರ ನೃತ್ಯರೇಖಾಚಿತ್ರಗಳಲ್ಲಿ ಗಮನಾರ್ಹ ಕೃತಿಮಾಲೆಯೊಂದಿದೆ. ಅದು ಪಶ್ಚಿಮ ಹಾಗೂ ಯೂರೋಪಿನ ನೃತ್ಯ ರೂಪಕವಾದ ಬ್ಯಾಲೆಗಳಿಗೆ ಸಂಬಂಧಿಸಿದ್ದು ನಮ್ಮ ಸಂಸ್ಕೃತಿಗೆ ಹೊಸದಾದ 'ಬ್ಯಾಲೆ'ಅದರ ವಿನ್ಯಾಸ ಚಲನೆ, ನಿಲುವು ಮುಂತಾದುವೆಲ್ಲಾ ಅಚ್ಚರಿ ಮೂಡಿಸುತ್ತವೆ. ಅನೇಕ ಭಾಗಗಳಲ್ಲಿ ಊಹಿಸಲು ಅಸಾಧ್ಯವಾದುದು. ಆರ್.ಎಸ್.ಎನ್. ಈ ಬ್ಯಾಲೆಗೆ ಹೇಗೆ ಮನ ಸೋತರು? ಎಂಬುದೇ ಕೌತುಕವನ್ನು ಉಂಟು ಮಾಡಬಲ್ಲದು. ಮಾರ್ಕ್ಸ್‌ವಾದಿ ಆರ್.ಎಸ್.ಎನ್. ಅಲ್ಲವೆ? ಬ್ಯಾಲೆಗೆ ರಷ್ಯಾ ವಿಖ್ಯಾತವಾದುದು. ಫ್ರಾನ್ಸ್, ಇಂಗ್ಲೆಂಡ್ ಗಳಿಗಿಂತಲೂ ರಷ್ಯಾದ ಪಾತ್ರ ಈ ನೃತ್ಯ ಪ್ರಕಾರಕ್ಕೆ ಹೆಚ್ಚು. ಬ್ಯಾಲೆ ನೃತ್ಯ ಪ್ರದರ್ಶನ ವ್ಯವಸ್ಥೆ ನೇಪಥ್ಯದ ಅಲಂಕಾರಕ್ಕೆ ಹಲವಾರು ಚಿತ್ರಕಲಾವಿದರು ಅಂದಿನ ಸಂದರ್ಭದಲ್ಲಿ ಸಹಕಾರ ನೀಡುತ್ತಿದ್ದರು. ರಷ್ಯದ ಪ್ರಸಿದ್ಧ, ಜನಪ್ರಿಯ ನೃತ್ಯರೂಪಕಗಳಲ್ಲಿ "ಲೆಕಾರ್‌ಸೇರ್", "ಸ್ಲೀಪಿಂಗ್ ಬ್ಯೂಟಿ", "ಕ್ರಿಮ್‌ಸನ್ ಸೇಲ್ಸ್", "ರೆಡಿ ಪಾಪಿ", "ರೋಮಿಯೋ ಜೂಲಿಯೆಟ್", "ಫ್ಲೇಮ್ ಆಫ್ ಪ್ಯಾರೀಸ್", "ಲೈಲಾ ಮಜ್ನು", "ಸ್ಟೋನ್‌ಫ್ಲವರ್", "ಫೈರ್ ಬರ್ಡ್", ಮೊದಲಾದವುಗಳನ್ನು ಇಲ್ಲಿ ಹೆಸರಿಸಬಹುದು. ಈ ಎಲ್ಲ ಬ್ಯಾಲೆಗಳಲ್ಲಿ ನರ್ತಕ ನರ್ತಕಿಯರು, ಖಚಿತ ನಿಲುವುಗಳು, ದೇಹಭಾಷೆ, ಸುಲಲಿತವಾಗಿ ಹರಿವ ಚಲನೆಗಳು, ಸ್ಥೈರ್ಯದಿಂದ ಕೂಡಿ, ಅಚ್ಚರಿಯುಂಟು ಮಾಡುವ ನೆನಪುಗಳು, ಗುಂಪು ನೃತ್ಯಗಳಲ್ಲಿನ ಶಿಸ್ತು, ಕ್ರಮಬದ್ಧತೆ ಇತ್ಯಾದಿ.. ಕಠಿಣ ಶಿಸ್ತಿನ ಶಿಕ್ಷಣದ ಫಲವಾಗಿ ಈ ನೃತ್ಯವು ಪರಿಪೂರ್ಣತೆಯೆಡೆಗೆ ಸಾಗುವುದು. ಈ ನೃತ್ಯ ನಾಟಕಗಳ ಹಿನ್ನೆಲೆಯಲ್ಲಿ ಆರ್.ಎಸ್.ಎನ್. ರೇಖಾ ಚಿತ್ರಗಳಲ್ಲಿ ನರ್ತಕ ನರ್ತಕಿಯರನ್ನು ರೇಖಿಸಿದ್ದಾರೆ. ವಿವಿಧ ಸನ್ನಿವೇಶಗಳ ನೂರಾರು ಚಿತ್ರಗಳನ್ನು ರಚಿಸಿದ್ದಾರೆ.

ಚಿತ್ರರಚನೆಗೆ ಪೆನ್ಸಿಲ್, ಪೆನ್, ಕುಂಚ ಯಾವುದೂ ಆಗಬಹುದು. ಈ ಚಿತ್ರಗಳಲ್ಲಿ ಅವರಸೂಕ್ಷ್ಮ ರೇಖಾದೃಷ್ಟಿ- ರೇಖಾ ಸಿದ್ಧಿ ಮುಂತಾದ ಗುಣಗಳ ಪರಿಚಯವಾಗುತ್ತದೆ. ಈ ನೃತ್ಯದ ಬ್ಯಾಲೆಯ ಚಿತ್ರಗಳು ಫ್ರಾನ್ಸ್‌ನ ಎಡ್ಗರ್ ಡೆಗಾಸ್‌ನ ನರ್ತಕಿಯರಷ್ಟೇ ಆಕರ್ಷಕ ರೇಖೆ ರೂಪ- ನೃತ್ಯಲಾಸ್ಯಗಳನ್ನು ಹೊಂದಿವೆ. ಬದುಕಿನುದ್ದಕ್ಕೂ ಬ್ರಹ್ಮಚಾರಿಯಾಗಿದ್ದ ಆರ್.ಎಸ್.ಎನ್.ರವರ ಹಲವು ರೇಖಾಚಿತ್ರಗಳಲ್ಲಿ ಹೆಣ್ಣುಗಳನ್ನು ಗ್ರಹಿಸಿರುವ ರೀತಿಯಲ್ಲಿ ತಲ್ಲೀನತೆ ಇದೆ.



ಆರ್. ಎಂ. ಹಡಪದ್‌ರವರು ಚಿತ್ರಿ
ಸಿರುವ ಆರ್.ಎಸ್.ಎನ್.ರವರ
ಭಾವಚಿತ್ರ : ಮಾಧ್ಯಮ : ತೈಲ
–ವರ್ಣ



ಸ್ವಭಾವಚಿತ್ರ
ರೇಖಾ ಮಾಧ್ಯಮ : ಆರ್.ಎಸ್.ಎನ್.




ಒಂದು ವರ್ಣ ಚಿತ್ರ
ಆರ್.ಎಸ್.ಎನ್. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿತ್ರಿಸಿದ್ದು



ರ್ ಎಸ್.ಎನ್.
ಖಾಚಿತ್ರದ ಶಕ್ತಿ



ಆರ್.ಎಸ್.ಎನ್.ರವರ
ಗೌತಮ ಬುದ್ಧ
ಮಾಧ್ಯಮ : ಪೋರ್ಸಿಲಿನ್



ಆರ್.ಎಸ್.ಎನ್.
ಲೇಖಿಸಿದ
ಕುವೆಂಪುರವರ
ಭಾವಚಿತ್ರ
1964




ಆರ್.ಎಸ್.ಎನ್.
ಗ್ರಹಿಸಿದ ರವಿಶಂಕರ್‌ರವರ
ಸಂಗೀತದ ಅನುಭವ



ಜಾನಪದ ನೃತ್ಯದ
ರೇಖಾಗ್ರಹಿಕೆ
ಆರ್.ಎಸ್.ಎನ್



ಆರ್.ಎಸ್.ಎನ್
ಸಾಂಸ್ಕೃತಿಕ ಚಿಂತಕನನ್ನು
ಗ್ರಹಿಸಿರುವ ರೀತಿ ನೋಡಿ




ಆರ್.ಎಸ್ ಎನ್.
ಒಂದು ರೇಖಾಚಿತ್ರ



ಒಂದು ರೇಖಾಚಿತ್ರ
ಆರ್.ಎಸ್.ಎನ್.

ದ. ರಾ. ಬೇಂದ್ರೆ
ಭಾವಶಿಲ್ಪ : ಆರ್.ಎಸ್.ಎನ್.
ಮಾಧ್ಯಮ : ಪ್ಲಾಸ್ಟರ್ ಆಫ್ ಪ್ಯಾರೀಸ್





ಕುವೆಂಪು
ಭಾವಶಿಲ್ಪ : ಆರ್.ಎಸ್.ಎನ್.
ಮಾಧ್ಯಮ : ಪ್ಲಾಸ್ಟರ್ ಆಫ್ ಪ್ಯಾರೀಸ್




ಎ.ಆರ್. ಕೃಷ್ಣಶಾಸ್ತ್ರಿ
ಭಾವಶಿಲ್ಪ : ಆರ್.ಎಸ್.ಎನ್.
ಮಾಧ್ಯಮ : ಪ್ಲಾಸ್ಟರ್ ಆಫ್ ಪ್ಯಾರೀಸ್




ಟಿ.ಪಿ. ಕೈಲಾಸಂ
